# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 4931/10/31/2019 (SB –III)**

**ದಿನಾಂಕ: 10–08–2022**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ಪ್ರೇಮ ಎಸ್.ಎಂ @ ಉಮಾದೇವಿ
ಕೋಂ ನಾಗೇಂದ್ರ
ಸೀಗೆಹಳ್ಳಿ ಗ್ರಾಮ, ಕೊತ್ತನೂರು ಅಂಚೆ,
ಶಿಡ್ಲಘಟ್ಟ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

## ಆದೇಶ

ಶ್ರೀಮತಿ ಪ್ರೇಮ ಎಸ್ಎಂ @ ಉಮಾದೇವಿ ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ, ತಾನು ರಮೇಶ್ ಎಂಬುವರ ಮಾಲೀಕತ್ವದ ಮನೆ ನಂ.1730, 18 ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ ನಗರ, ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಸದರಿ ಮನೆಯಲ್ಲಿ 05 ಟೈಲರಿಂಗ್ ಮಿಷನ್ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ರಮೇಶ್ ರವರು ತನ್ನ ಬಗ್ಗೆ ವಿಚಾರಿಸಿಕೊಂಡು ತನ್ನ ಮನೆಯ ಬಳಿ ಬಂದು ತನ್ನನ್ನು ಮನೆ ಒಳಗೆ ಎಳೆದುಕೊಂಡು ಹೋಗಿ ನನ್ನೊಂದಿಗೆ ಸಹಕರಿಸು ಎಂದು ಹೇಳಿ ತನ್ನ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುತ್ತಾರೆ. ಈ ಬಗ್ಗೆ ತಾನು ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಸಹ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಸದರಿ ರಮೇಶ್ ರವರು ಮನೆಗೆ ಬಂದು ಬೀಗ ಹಾಕಿಕೊಂಡು ತನ್ನನ್ನು ಬೀದಿಗೆ ತಳ್ಳಿ, ಮನೆಯಲ್ಲಿದ್ದ ಯಾವುದೇ ಸಾಮಾನುಗಳನ್ನು ನೀಡಿರುವುದಿಲ್ಲವೆಂದು ಆರೋಪಿಸಿ, ಸದರಿ ಮನೆಯ ಮಾಲೀಕ ರಮೇಶ್ ರವರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇತ್ಯಾದಿಯಾಗಿ ಕೋರಿದ್ದಾರೆ.

ದೂರು ಅರ್ಜಿಯ ವಿಷಯದ ಬಗ್ಗೆ ಸಹಾಯಕ ಪೊಲೀಸ್ ಆಯುಕ್ತರು, ಜಯನಗರ ಉಪವಿಭಾಗ ರವರು ವಿಚಾರಣೆ ಮಾಡಿದ್ದು, ಜೆ.ಪಿ ನಗರ ಪೊಲೀಸ್ ಠಾಣೆಯ ಮೊ.ಸಂ.162/19

ಕಲಂ 341, 354 ಐಪಿಸಿ ಕೇಸಿನ ಕಡತವನ್ನು ಪರಿಶೀಲಿಸಲಾಗಿ, ಶ್ರೀಮತಿ ಪ್ರೇಮ ಎಸ್.ಎಂ @ ಉಮಾದೇವಿ ಕೋಂ ನಾಗೇಂದ್ರ, ಮನೆ ನಂ.1730, 18ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ ನಗರ, ಬೆಂಗಳೂರು ರವರು ದಿನಾಂಕ:06.09.2019 ರಂದು ಜೆ.ಪಿ ನಗರ ಪೊಲೀಸ್ ಠಾಣೆಗೆ ಹಾಜರಾಗಿ ತಾನು ಟೈಲರಿಂಗ್ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡಿದ್ದು, ನನ್ನ ಗಂಡ ಹಾಗೂ ನನ್ನ ನಡುವೆ ಹಣಕಾಸಿನ ವಿಚಾರದಲ್ಲಿ ಮನಸ್ತಾಪವಾಗಿ ನವೆಂಬರ್ ತಿಂಗಳಲ್ಲಿ ಬಿಟ್ಟು ಹೋಗಿರುತ್ತಾರೆ. ನನ್ನ ಮಗ ಅಭಿಲಾಷ್‌ಗೌಡ ಉಜಿರೆ ಎಸ್‌ಡಿಎಂ ಇಂಜೀನಿಯರಿಂಗ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ದಿನಾಂಕ:12.05.2019 ರಂದು ನಾನು ಮೇಲಿನ ವಿಳಾಸದಲ್ಲಿ ಮನೆಯ ಮಾಲೀಕರಾದ ರಮೇಶ್ ಎಂಬುವರ ವಾಸದ ಮನೆಯ 2ನೇ ಮಹಡಿಯಲ್ಲಿರುವ ಮನೆಯಲ್ಲಿ ಬಾಡಿಗೆಗೆ ಬಂದಿದ್ದು, ಮುಂಗಡವಾಗಿ ರೂ.20,000/– ಹಣವನ್ನು ನೀಡಿದ್ದು, ಉಳಿದ ರೂ.30,000/– ಗಳನ್ನು ದಿನಾಂಕ:26.05.2019 ರಂದು ನೀಡುವುದಾಗಿ ಚೆಕ್ ನೀಡಿರುತ್ತೇನೆ. ದಿನಾಂಕ:18.05.2019 ರಂದು ಮನೆಯ ಮಾಲೀಕರಾದ ರಮೇಶ್ ರವರು ನಮ್ಮ ಮನೆಗೆ ಬಂದು ಮುಂಗಡ ಹಣದ ಚೆಕ್ಕು ವಿಷಯದ ಬಗ್ಗೆ ಮಾತನಾಡುತ್ತಾ ನನ್ನ ಸಂಸಾರ ಮತ್ತು ಕುಟುಂಬದ ಬಗ್ಗೆ ವಿಚಾರ ಮಾಡಿ, ನೀನು ನೋಡಲು ಚೆನ್ನಾಗಿ ಇದ್ದೀಯಾ, ನಾನೇ ನಿನ್ನನ್ನು ನೋಡಿಕೊಳ್ಳುತ್ತೇನೆ, ಯಾವುದೇ ಬಾಡಿಗೆ ಹಣ ಕೊಡಬೇಡ ಎಂದು ಹೇಳಿ ನನ್ನ ಹತ್ತಿರ ಬಂದಾಗ ನಾನು ಮನೆಯಿಂದ ಹೊರಗೆ ಹೋಗಲು ಪ್ರಯತ್ನ ಪಟ್ಟಾಗ ತನ್ನ ಕೈಗಳನ್ನು ಹಿಡಿದು ಎಳೆದಾಡಿ ದೌರ್ಜನ್ಯ ಎಸಗಿರುತ್ತಾರೆಂದು ನೀಡಿದ ದೂರಿನ ಬಗ್ಗೆ ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಶ್ರೀ ಸೋಮಪ್ಪ ಗೋಡಿ ರವರು ದೂರನ್ನು ಸ್ವೀಕರಿಸಿ ಮೊ.ಸಂ:162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ಅರ್ಜಿದಾರರು ದಿನಾಂಕ:25.08.2019 ರಂದು ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನೀಡಿದ ದೂರಿನ ಮೇರೆಗೆ ಠಾಣೆಯಲ್ಲಿದ್ದ ಹೆಚ್‌ಸಿ 5256 ಶ್ರೀ ಅಶ್ವಥ್‌ನಾರಾಯಣ ರವರು ದೂರನ್ನು ಸ್ವೀಕರಿಸಿ ಎನ್‌ಸಿಆರ್ ಸಂ:284/19 ರಲ್ಲಿ ನಮೂದಿಸಿರುತ್ತಾರೆ. ಇದಾದ ನಂತರ ಪಿಎಸ್ಐ ರವರು ಠಾಣೆಯಲ್ಲಿ ನಮೂದಿಸಿರುವ ಎನ್‌ಸಿಆರ್‌ಗಳನ್ನು ಪರಿಶೀಲಿಸಿದ್ದು, ಆಗ ಎನ್‌ಸಿಆರ್ ಸಂಖ್ಯೆ:284/19 ರಲ್ಲಿ ನೀಡಿರುವ ಅಂಶವು ಸಂಜ್ಞೇಯ ಆಗಿದ್ದುದರಿಂದ ಅರ್ಜಿದಾರರನ್ನು ಸಂಪರ್ಕಿಸಿ ಮತ್ತೊಂದು ದೂರನ್ನು ಪಡೆದು ಮೊ.ಸಂ:162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ.

ತನಿಖಾ ಕಾಲದಲ್ಲಿ ದಿನಾಂಕ:21.09.2019 ರಂದು ಪಿರ್ಯಾದುದಾರರಾದ ಶ್ರೀಮತಿ ಪ್ರೇಮ ಎಸ್ಎಂ @ ಉಮಾದೇವಿ ರವರ ಸ್ವತಃ ಹೇಳಿಕೆಯನ್ನು ಮಾನ್ಯ 3ನೇ ಸಂಚಾರ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಕಲಂ 164(5) ಸಿಆರ್‌ಪಿಸಿ ರೀತ್ಯಾ ದಾಖಲಿಸಲಾಗಿರುತ್ತದೆ. ಪಿರ್ಯಾದುದಾರರು ಬಾಡಿಗೆಗೆ ವಾಸವಿದ್ದರು ಎನ್ನಲಾದ ಬಿಲ್ಡಿಂಗ್‌ನ ಬಾಡಿಗೆದಾರರಾದ ಶ್ರೀ ಶಿವಣ್ಣ ಬಿನ್ ಲೇಟ್ ಹುಚ್ಚೇಗೌಡ, ಶ್ರೀಮತಿ ಜ್ಯೋತಿ ಕೋಂ ದತ್ತಾತ್ರೇಯ ರಾಮರಾವ್ ಕುಲಕರ್ಣಿ, ಶ್ರೀಮತಿ ಮಮತ ಕೋಂ ಭುಂಡರಾಂ ಈ ಸಾಕ್ಷಿದಾರರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ಆರೋಪಿ ರಮೇಶ್ ಎಂಬುವರು ಮಾನ್ಯ ಸಿಸಿಹೆಚ್ 46ನೇ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡಿರುತ್ತಾರೆ. ಈ ಕೇಸಿನಲ್ಲಿ ಅರ್ಜಿದಾರರು ಹಾಗೂ ಆರೋಪಿಯ ಮೊಬೈಲ್ ಫೋನ್ ನಂಬರ್‌ಗಳನ್ನು ಪಡೆದು ಅವುಗಳ ಸಿಡಿಆರ್ ಅನ್ನು ಸಂಗ್ರಹಿಸಿ ಪರಿಶೀಲಿಸಿರುತ್ತದೆ. ಆರೋಪಿಯ ಮನೆಯಲ್ಲಿ ಬಾಡಿಗೆಗೆ ವಾಸವಿರುವವರ ಕರಾರು ಪತ್ರಗಳನ್ನು ಪಡೆದುಕೊಳ್ಳಲಾಗಿರುತ್ತದೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಪೊಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಪಾದಿಸಿದ್ದು, ಆದರೆ ಅರ್ಜಿದಾರರು ನೀಡಿದ ದೂರಿನ ಅನ್ವಯ ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ 162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ಪ್ರಸ್ತುತ ಪ್ರಕರಣ ತನಿಖೆಯಲ್ಲಿರುತ್ತದೆ. ಸಾಕ್ಷಿದಾರರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ ಹಾಗೂ ಇನ್ನಿತರೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿರುತ್ತದೆ. ಆದಾಗ್ಯೂ ತನಿಖಾಧಿಕಾರಿಯಾದ ಪಿಎಸ್ಐ ರವರಿಗೆ ಪ್ರಕರಣದಲ್ಲಿ ಎಲ್ಲಾ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ತನಿಖೆ ಪೂರ್ಣಗೊಳಿಸಿ ಆದಷ್ಟು ಬೇಗ ಘನ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆಂದು ದಿನಾಂಕ:03.03.2020 ರಲ್ಲಿ ಉಪಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರು ಆಯೋಗಕ್ಕೆ ವರದಿಯನ್ನು ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದೂರುದಾರರು ತಮ್ಮ ಅಭಿಪ್ರಾಯದಲ್ಲಿ ಜೆ.ಪಿ.ನಗರ ಪೊಲೀಸ್ ಠಾಣೆಯ ಪಿಎಸ್ಐ ರವರು ಕೇಸಿನ ವಿವರವನ್ನು ಕೇಳಲು ಹೋದರೆ ಸಹಕಾರ ನೀಡದೇ ಮನೆಯ ಮಾಲೀಕನ ಪರವಾಗಿ ಮಾತನಾಡುತ್ತಿದ್ದು, ಬಿ ರಿಪೋರ್ಟ್ ಹಾಕಿ ಕೇಸು ಮುಗಿಸುವ ಬಗ್ಗೆ ಮಾತನಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರಿಂದ ತಾನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಲಾಗಿ, ಇದರಿಂದ ತನಗೆ ಎಲ್ಲಾ ಮಾಹಿತಿಗಳು ಗೊತ್ತಾಗಿದೆ ಎಂದು ಹೃದಯ ಪೂರ್ವಕ ಧನ್ಯವಾದಗಳನ್ನು ತಿಳಿಸಿರುತ್ತಾರೆ.

ತನ್ನನ್ನು ದಿನಾಂಕ:28.08.2020 ರಂದು ಪಿಎಸ್ಐ ರವರು ಮನೆಯ ಹತ್ತಿರ ಕರೆದುಕೊಂಡು ಹೋಗಿ ಮನೆಯ ವಿವರವನ್ನು ಪಡೆದುಕೊಂಡಿದ್ದು, ತನ್ನ ಸೈನ್ ತೆಗೆದುಕೊಂಡು ಹೋಗಿದ್ದಾರೆ. ವರದಿಯಲ್ಲಿ ತಿಳಿಸಿದ ಮೂರು ಸಾಕ್ಷಿಗಳು ತನಗೆ ಯಾವುದೇ ರೀತಿ ಸಹಾಯ ಮಾಡುವುದಿಲ್ಲ. ಏಕೆಂದರೆ, ಸಾಕ್ಷಿದಾರರಾದ ಶ್ರೀಮತಿ ಮಮತ ಬಂಡಾರಿ ರವರನ್ನು ತನ್ನ ಪರ ಸಾಕ್ಷಿ ಹೇಳಿ ಎಂದು ಕೇಳಿಕೊಂಡಾಗ ಶ್ರೀಮತಿ ಮಮತ ಬಂಡಾರಿ ರವರು ಶ್ರೀ ರಮೇಶ್‌ರವರ ಕೆಳಮಹಡಿಯನ್ನು ಬಾಡಿಗೆಗೆ ತೆಗೆದು ಗೋಡನ್ ಮಾಡಿಕೊಂಡಿದ್ದು, ಇದರಿಂದ ತನ್ನ ಪರ ಸಾಕ್ಷಿ ಹೇಳಲು ಅಗುವುದಿಲ್ಲವೆಂದು ಹಾಗೂ ಶ್ರೀ ರಮೇಶ್ ರವರ ಪರ ಸಾಕ್ಷಿ ಹೇಳಲು ಭಯಪಡಿಸಿರುತ್ತಾರೆಂದು ಹೇಳಿದ್ದಾರೆ. ಸಾಕ್ಷಿದಾರರಾದ ಶ್ರೀಮತಿ ಜ್ಯೋತಿ ರವರು ಶ್ರೀ ರಮೇಶ್‌ರವರ ಬಿಲ್ಡಿಂಗ್‌ನ ಒಂದನೇ ಮಹಡಿಯ ಮನೆಯನ್ನು ಭೋಗ್ಯಕ್ಕೆ ಪಡೆದಿದ್ದು, ಅವರನ್ನು ತನ್ನ ಪರ ಸಾಕ್ಷಿ ಹೇಳಿ ಎಂದು ಕೇಳಿಕೊಂಡಾಗ ಅವರು ತನ್ನ ಬಳಿ ಮಾತನಾಡಲು ನಿಲ್ಲಿಸಿರುತ್ತಾರೆಂದು ಹೇಳುತ್ತಾರೆ. ಸಾಕ್ಷಿದಾರರಾದ ಶ್ರೀ ಶಿವಣ್ಣ ವೃತ್ತಿಯಲ್ಲಿ ಟೈಲರ್ ಶಾಪ್ ಇಟ್ಟುಕೊಂಡಿದ್ದಾರೆ ಮತ್ತು ಶ್ರೀ ರಮೇಶ್ ರವರು ಜಕ್ಕೂರಿನಲ್ಲಿ ವಾಸವಿರುವುದರಿಂದ ಬಿಲ್ಡಿಂಗ್ ನಂ.1730 ರ ಇನ್‌ಚಾರ್ಜ್ ಆಗಿದ್ದಾರೆ. ತಾನು ಮನೆಯ ಬಾಡಿಗೆಗೆ ಹೋಗುವಾಗ ಮುಂಗಡ ಹಣ 20000/– ಹಾಗೂ ರೂ.30000/– ಚೆಕ್‌ನ್ನು ತಾನು ಫೋನಿನಲ್ಲಿ ಮಾತನಾಡಿ ಶ್ರೀ ರಮೇಶ್‌ರವರ ಅನುಮತಿ ಪಡೆದು ದಿನಾಂಕ 12–05–2019ರಂದು ಶ್ರೀ ಶಿವಣ್ಣನವರಿಗೆ ನೀಡಿರುತ್ತೇನೆ. ಇವರ ಫೋನನ್ನು ಟ್ಯಾಪ್ ಮಾಡಿದರೆ ನಿಜ ಗೊತ್ತಾಗುತ್ತದೆಂದು ಹೇಳುತ್ತಾರೆ. ದಿನಾಂಕ 14–05–2019 ರಿಂದ 05–08–2019 ರವರೆಗೆ ಹಾಗೂ ತನ್ನನ್ನು ಹೊರಗಡೆ ಹಾಕಿದ ನಂತರ ತನ್ನ ಎಲ್ಲಾ ಸಾಮಾನುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿರುತ್ತಾರೆ, ಇದನ್ನು ಸಿಸಿಟಿವಿ ಯಿಂದ ಪರಿಶೀಲನೆ ಮಾಡಬೇಕೆಂದು ಹಾಗೂ ಮೊಬೈಲ್ ಟ್ಯಾಪಿಂಗ್ ಸಿಸಿಟಿವಿ ಕಲೆಹಾಕಿ ಸರಿಯಾಗಿ ತನಿಖೆ ನಡೆಸದೇ ಹೋದರೆ ತನಗೆ ಮೋಸ ಅನ್ಯಾಯವಾಗುತ್ತದೆಂದು ಇತ್ಯಾದಿಯಾಗಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.

ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರುದಾರರು ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ್ದ ದೂರನ್ನು ಮೊ.ಸಂ:162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಸಾಕ್ಷಿದಾರರನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದು ಕೊಳ್ಳಲಾಗಿರುತ್ತದೆ. ಪ್ರಸ್ತುತ ಪ್ರಕರಣ ತನಿಖೆಯಲ್ಲಿರುವುದಾಗಿ ವರದಿ ಮಾಡಲಾಗಿದೆ. ಆದರೆ ದೂರುದಾರರು ವರದಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ತನ್ನನ್ನು ಮನೆಯಿಂದ ಹೊರಗಡೆ ಹಾಕಿದ ನಂತರ ತನ್ನ ಎಲ್ಲಾ ಸಾಮಾನುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿರುತ್ತಾರೆ ಈ ಕುರಿತು

ಸಿಸಿಟಿವಿಯನ್ನು ಪರಿಶೀಲನೆ ಮಾಡಬೇಕೆಂದು ಇತ್ಯಾದಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಸದರಿ ದೂರುದಾರರ ಅಭಿಪ್ರಾಯದ ಪ್ರತಿಯನ್ನು ಉಪಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ನಗರ ಅವರಿಗೆ ಕಳುಹಿಸಿ, ಈ ಬಗ್ಗೆ ಖುದ್ದಾಗಿ ಪರಿಶೀಲಿಸಿ ಸಂಬಂಧಪಟ್ಟವರಿಂದ ಹೇಳಿಕೆ ಪಡೆದು ಸ್ಪಷ್ಟ ಅಭಿಪ್ರಾಯದೊಂದಿಗೆ 15 ದಿನಗಳೊಳಗಾಗಿ ಆಯೋಗಕ್ಕೆ ಮರುಪರಿಶೀಲನಾ ವರದಿಯನ್ನು ಸಲ್ಲಿಸುವಂತೆ ಉಪಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರಿಗೆ ಸೂಚಿಸಲಾಗಿದ್ದು, ಅದರಂತೆ ಸದರಿಯವರು ಈ ಕೆಳಕಂಡಂತೆ ಆಯೋಗಕ್ಕೆ ಮರು ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಜೆ.ಪಿ ನಗರ ಪೊಲೀಸ್ ಠಾಣೆಯ ಪೊಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಪಾದಿಸಿದ್ದು, ಆದರೆ ಅರ್ಜಿದಾರರು ನೀಡಿದ ದೂರಿನ ಅನ್ವಯ ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ:162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದು, ತನಿಖಾ ಕಾಲದಲ್ಲಿ ಸಾಕ್ಷಿದಾರರ ಹೇಳಿಕೆಯಿಂದ ಮತ್ತು ರಮೇಶರವರ ಮೊಬೈಲ್ ಕರೆಗಳ ಸಿಡಿಆರ್ ಅನ್ನು ಸಂಗ್ರಹಿಸಿ ಪರಿಶೀಲಿಸಿದ್ದು, ಪಿರ್ಯಾದು ಮತ್ತು ಆರೋಪಿ ಪರಸ್ಪರ ವಿಭಿನ್ನ ಪ್ರದೇಶಗಳಲ್ಲಿ ಇರುವುದು ಕಂಡು ಬಂದಿರುತ್ತದೆ. ಇದರಿಂದ ಘಟನೆ ಜರುಗದೇ ಇದ್ದರೂ ಸುಳ್ಳು ಆರೋಪಗಳನ್ನು ಮಾಡಿ ದೂರು ನೀಡಿರುತ್ತಾರೆಂದು ಪರಿಗಣಿಸಿ, ಮಾನ್ಯ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿಯನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆಂದು ಮರು ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ.

ದೂರು, ವರದಿ, ಅಭಿಪ್ರಾಯ ಹಾಗೂ ಮರುಪರಿಶೀಲನಾ ವರದಿಯನ್ನು ಪರಿಶೀಲಿಸಲಾಗಿ, ದೂರುದಾರರು ಅವರ ಅಭಿಪ್ರಾಯದಲ್ಲಿ ತಿಳಿಸಿರುವ ಅಂಶಗಳನ್ನು ಗಮನಿಸಿ, ದೂರುದಾರರಾದ ಶ್ರೀಮತಿ ಪ್ರೇಮರವರಿಗೆ ಪ್ರಕರಣದ ಬಗ್ಗೆ ಏನಾದರೂ ಹೇಳುವುದು ಇದ್ದಲ್ಲಿ, ದಿನಾಂಕ:03.04.2021 ರಂದು ಬೆಳಗ್ಗೆ 12.00 ಗಂಟೆಗೆ ಆಯೋಗದ ಮುಂದೆ ಹಾಜರಾಗುವಂತೆ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993 ಕಲಂ 13 ರಡಿ ನೋಟಿಸ್ ಜಾರಿ ಮಾಡಿ ಹೇಳಿಕೆಯನ್ನು ಸಲ್ಲಿಸುವಂತೆ ಹಾಗೂ ಜೆ.ಪಿ ನಗರ ಪೊಲೀಸ್ ಠಾಣೆಯ ಸಬ್ಇನ್ಸ್‌ಪೆಕ್ಟರ್ ಶ್ರೀ ಸೋಮಪ್ಪ ಗೋಡಿ ರವರು ಕೂಡ ದಿನಾಂಕ:03.04.2021 ರಂದು ಬೆಳಗ್ಗೆ 12.00 ಗಂಟೆಗೆ ಆಯೋಗದ ಮುಂದೆ ಹಾಜರಾಗುವಂತೆ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993 ಕಲಂ 13 ರಡಿ ನೋಟಿಸ್ ಜಾರಿ ಮಾಡಿದ್ದು, ದಿನಾಂಕ:03.04.2021ರಂದು ಸದರಿಯವರು ಆಯೋಗದ ಮುಂದೆ ಹಾಜರಿದ್ದು, ಶ್ರೀಮತಿ ಪ್ರೇಮ ರವರು ಅವರ ಹೇಳಿಕೆ ನೀಡಿರುತ್ತಾರೆ.

ಶ್ರೀಮತಿ ಪ್ರೇಮ ರವರು ದಿನಾಂಕ:03.04.2021ರಂದು ಆಯೋಗದ ಮುಂದೆ ನೀಡಿದ ಹೇಳಿಕೆ ಕೆಳಕಂಡಂತಿರುತ್ತದೆ:

"ನಾನು ಮತ್ತು ನನ್ನ ಗಂಡ ಶ್ರೀ ನಾಗೇಂದ್ರ ರವರ ಮದ್ಯೆ ನನ್ನ ಮಗನ ಮೆಡಿಕಲ್ ವಿದ್ಯಾಭ್ಯಾಸದ ಫೀಸ್‌ನ ಹಣಕಾಸಿನ ವಿಷಯವಾಗಿ ಆಗಾಗ್ಗೆ ಜಗಳವಾಗುತ್ತಿದ್ದು, ಡಿಸೆಂಬರ್ 2018ರಿಂದ ನಾವಿಬ್ಬರು ದೂರವಿದ್ದೇವೆ. ನಾವು ಇದ್ದ ಹಳೇ ಮನೆಯ ಬಾಡಿಗೆ 17,000/– ಬಾಡಿಗೆ ಕಟ್ಟಲು ಸಾಧ್ಯವಾಗದೇ ಖಾಲಿ ಮಾಡಿ, ಹೊಸ ಮನೆ ಹುಡುಕಲು ಮನೆಯ ಬ್ರೋಕರ್ ರವರ ಹತ್ತಿರ ಹೇಳಿದಾಗ ಅವರು ದಿನಾಂಕ.05.05.2019ರಂದು ನನ್ನನ್ನು ಮನೆ ನಂ.1730, 18ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಜೆ.ಪಿ. ನಗರ 2ನೇ ಫೇಸ್, ಬೆಂಗಳೂರು ಇಲ್ಲಿ ವಾಸವಿರುವ ಮನೆಯ ಮಾಲೀಕರಾದ ಶ್ರೀ ರಮೇಶ್ ಎಂಬುವವರ ಮನೆಗೆ ಕರೆದುಕೊಂಡು ಹೋಗಿದ್ದು, ಮನೆಯ ಮಾಲೀಕರಾದ ಶ್ರೀ ರಮೇಶ್ ರವರೇ ಮನೆಯ ಬಾಡಿಗೆ 10,000/–, ಅಡ್ವಾನ್ಸ್ 50,000/– ಎಂದು ಹೇಳಿದರು. ಇವರ ಮನೆಯ ಬಾಡಿಗೆ ನೋಡಿಕೊಳ್ಳಲು ಶ್ರೀ ಶಿವಣ್ಣ ಎಂಬುವವರನ್ನು ನೇಮಿಸಿದ್ದು, ಅವರಿಗೆ ದಿನಾಂಕ.12.05.2019 ರಂದು 20,000/– ರೂಗಳನ್ನು ನಗದಾಗಿ ನೀಡಿ, ಬಾಕಿ 30,000/ ರೂಗಳಿಗೆ ಚೆಕ್ ನೀಡಿರುತ್ತೇನೆ.

ನಂತರ ಮನೆಯ ಮಾಲೀಕರಾದ ಶ್ರೀ ರಮೇಶ್ ರವರು ಚೆಕ್ ವಿಷಯವಾಗಿ ಮಾತನಾಡಲು ದಿನಾಂಕ.18.05.2019 ರಂದು ನಮ್ಮ ಮನೆಗೆ ಬಂದಿದ್ದರು. ಆಗ ಫ್ಯಾಮಿಲಿ ಬಗ್ಗೆ ಕೇಳಿ, ನೀನು ಏನು ಬಾಡಿಗೆ ಕೊಡಬೇಡ, ನನ್ನ ಜೊತೆ ಸಹಕರಿಸು ಎಂದು ನನ್ನ ಕೈ ಹಿಡಿಯಲು ಬಂದಾಗ, ಅದಕ್ಕೆ ನಾನು ಪ್ರತಿರೋಧ ವ್ಯಕ್ತಪಡಿಸಿ, ನಾನು ಜೋರಾಗಿ ಕೂಗಿಕೊಳ್ಳುತ್ತೇನೆ ದಯವಿಟ್ಟು ಹೊರಗೆ ಹೋಗಿ ಎಂದು ಹೇಳಿದಾಗ ಅವರು ಹೊರಗೆ ಹೋದರು. ಅದಕ್ಕೆ ನಾನು ಈ ಮನೆಯಲ್ಲಿರುವುದು ಸೇಫ್ ಅಲ್ಲ ಎಂದು ತಿಳಿದು, ನಾನು ಮನೆಯ ಮಾಲೀಕರಿಗೆ ನಾನು ಮನೆ ಖಾಲಿ ಮಾಡುತ್ತೇನೆ, ನಾನು ಎಷ್ಟು ದಿನ ಈ ಮನೆಯಲ್ಲಿ ಇದ್ದೆನೊ ಅಷ್ಟು ದಿನದ ಬಾಡಿಗೆ ಹಣವನ್ನು ಹಿಡಿದುಕೊಂಡು, ಅಡ್ವಾನ್ಸ್ ಅನ್ನು ಮತ್ತು 30,000/– ರೂಗಳ ಚೆಕ್ ಅನ್ನು ವಾಪಸ್ ಕೊಡಿ ಎಂದು ಕೇಳಿದೆ. ಆದರೆ ಅವರು ಮಾತನಾಡದೇ ಹೊರಟು ಹೋದರು.

ನಂತರ ಒಂದು ವಾರ ಆದ ಮೇಲೆ ಬೇರೆ ಮನೆಯನ್ನು ಹುಡುಕಿ, ಮನೆಯ ಮಾಲೀಕರ ಪರವಾಗಿ ಬಾಡಿಗೆ ತೆಗೆದುಕೊಳ್ಳುತ್ತಿದ್ದ ಶ್ರೀ ಶಿವಣ್ಣ ನವರಿಗೆ ಮನೆ ಸಿಕ್ಕಿದೆ, ಅವರು ಮನೆಯ ಮಾಲೀಕರು ದೂರವಾಣಿ ಮುಖಾಂತರ ತಿಳಿಸಿದರು. 10 ದಿನಗಳ ನಂತರ ಮನೆಯ ಮಾಲೀಕರಾದ ಶ್ರೀ ರಮೇಶ್ ರವರು ನಮ್ಮ ಮನೆಗೆ ಬಂದು ನನ್ನ ಜೊತೆ ಸಹಕರಿಸು ಎಂದು ಕೇಳಿದ್ದು, ನೀನು ಸಹಕರಿಸದೇ ಹೋದರೇ, ಮನೆಯ ಅಗ್ರಿಮೆಂಟ್ ಕೂಡ ನಿನ್ನ ಹತ್ತಿರ ಇಲ್ಲ, ನನಗೆ ಜೆ.ಪಿ ನಗರ ಪೊಲೀಸ್ ಠಾಣೆಯ ಪೊಲೀಸರೆಲ್ಲ ಗೊತ್ತು, ಹಾಗೂ ಪೊಲಿಟಿಕಲ್ ಪವರ್ ಇದೆ ರಾತ್ರೋ ರಾತ್ರಿ ನಿನ್ನ ಮನೆಯ ಸಾಮಾನುಗಳನ್ನು ಇಲ್ಲದೆ ಮಾಡುತ್ತೇನೆ ಪುನ: ನನ್ನ ಕೈ ಹಿಡಿದು

ಸಹಕರಿಸುವಂತೆ ಹೇಳುತ್ತಿದ್ದಾಗ, ನಾನು ನನ್ನ ಮೊಬೈಲ್‌ನಿಂದ ರೆಕಾರ್ಡ್ ಮಾಡಲು ಶುರು ಮಾಡಿದೆ, ಆಗ ತನ್ನ ಕೈಯಲ್ಲಿದ್ದ ಮೊಬೈಲ್ ಅನ್ನು ಕಿತ್ತುಕೊಂಡು ಹೊಡೆದು ಹಾಕಿ, ನನ್ನನ್ನು ಮನೆಯಿಂದ ಹೊರಗೆ ತಳ್ಳಿ, ಮನೆಯನ್ನು ಬೀಗ ಹಾಕಿದರು. ಆಗ ಸಂಜೆ 6.00 ಗಂಟೆಯಾಗಿತ್ತು.

ನಂತರ ನಾನು ಬೇರೆ ಮೊಬೈಲ್ ನಿಂದ ಹೊಯ್ಸಳದವರಿಗೆ ಫೋನ್ ಮಾಡಿದೆ. ಅವರು ತಕ್ಷಣ ಬಂದು, ನೀನು ಪೊಲೀಸ್ ಠಾಣೆಗೆ ಹೋಗು ನಾನು ಮಾತನಾಡಿ ಮನೆಯ ಬೀಗದ ಕೀ ಕೊಡಲು ಹೇಳುತ್ತೇನೆಂದು ಹೇಳಿದರು. ನಾನು ಜೆ.ಪಿ ನಗರ ಪೊಲೀಸ್ ಹೋದಾಗ ಅಲ್ಲಿ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಅವರು ಇದ್ದರು. ಅವರಿಗೆ ನಡೆದ ಎಲ್ಲಾ ವಿಷಯವನ್ನು ತಿಳಿಸಿದೆ. ನೀನು ಮನೆಯ ಮಾಲೀಕರಿಗೆ ಕೊಟ್ಟ ಚೆಕ್ ಮತ್ತು ಚೆಕ್ ನಂಬರ್ ತೆಗೆದುಕೊಂಡು ಬಾ, ಮನೆಯ ಅಗ್ರಿಮೆಂಟ್ ತೆಗೆದುಕೊಂಡು ಬಾ ಮತ್ತು ನೀನು ಅಲ್ಲಿ ವಾಸವಿದ್ದೀಯಾ ಎಂಬುದ್ದಕ್ಕೆ ಏನು ಪ್ರೂಫ್ ಇದೆ ಇತ್ಯಾಧಿಯಾಗಿ ಕೇಳಿದರು. ಆಗ ನನಗೆ ಏನು ಮಾಡಲು ತಿಳಿಯದೇ ಇದ್ದಾಗ ನನಗೆ ಒಬ್ಬರು ಮಾನವ ಹಕ್ಕುಗಳ ಆಯೋಗದ ವಿಳಾಸ ಕೊಟ್ಟರು. ಆಗ ಇಲ್ಲಿಗೆ ಬಂದು ಡಿ.ವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಭೇಟಿ ಮಾಡಿದೆ. ಅವರು ಜೆ.ಪಿ ನಗರ ಪೊಲೀಸ್ ಠಾಣೆಗೆ ಫೋನ್ ಮಾಡಿ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ್ ರವರಿಗೆ ನನಗೆ ತೊಂದರೆಯಾಗಿರುವ ಬಗ್ಗೆ ತಿಳಿಸಿ, ಅವರ ಮನೆಯ ಸಾಮಾನುಗಳನ್ನು ಕೊಡಿಸಿಕೊಡಿ ಎಂದು ಹೇಳಿದರು. ಆಗ ಹೆಚ್‌ಸಿ–5256 ಶ್ರೀ ಅಶ್ವತ್ ನಾರಾಯಣ ರವರು ಎನ್.ಸಿ.ಆರ್ ನಂ.284/2019 ಅನ್ನು ನಮೂದು ಮಾಡಿಕೊಂಡು, ಮನೆಯ ಮಾಲೀಕರಾದ ಶ್ರೀ ರಮೇಶ್ ರವರನ್ನು ಕರೆಯಿಸಿ, ನಿಮ್ಮ ಮನೆಯ ಎಲ್ಲಾ ಸಾಮಾನುಗಳನ್ನು ಕೊಡಿಸುತ್ತೇನೆ ಎಂದು ಹೇಳಿ ಕಳುಹಿಸಿದರು. ತದನಂತರ ನಾನು ಆಗಾಗ ಪೊಲೀಸ್ ಠಾಣೆಗೆ ಹೋಗಿ ಬರುತ್ತಿದ್ದೆ. ಆದರೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ಇದ್ದದ್ದಕ್ಕಾಗಿ ನಾನು ಪುನ: ಮಾನವ ಹಕ್ಕುಗಳ ಆಯೋಗಕ್ಕೆ ಬಂದು ಡಿ.ವೈ.ಎಸ್.ಪಿ ಶ್ರೀ ಕೇಶವ್ ಸರ್ ಬಳಿ ಬಂದು ಹೇಳಿದಾಗ ಅವರು ಪುನ: ಜೆ.ಪಿ. ನಗರ ಪೊಲೀಸ್ ಠಾಣೆಗೆ ಫೋನ್ ಮಾಡಿ ಎಫ್.ಐ.ಆರ್ ದಾಖಲಿಸಿಕೊಳ್ಳುವಂತೆ ಹೇಳಿದರು. ಆಗ ನಾನು ಠಾಣೆಗೆ ಹೋದಾಗ ಠಾಣಾ ಮೊ.ಸಂಖ್ಯೆ.162/2019, ಕಲಂ 341, 354 ಐಪಿಸಿ ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡರು. ಆದರೆ ಏನು ಕ್ರಮ ತೆಗೆದುಕೊಳ್ಳದೇ ಇದ್ದದ್ದರಿಂದ ಪುನ: ನಾನು ಮಾನವ ಹಕ್ಕುಗಳ ಆಯೋಗಕ್ಕೆ ಬಂದು ಡಿ.ವೈ.ಎಸ್.ಪಿ ಶ್ರೀ ಕೇಶವ್ ಸರ್ ಅನ್ನು ಭೇಟಿ ಮಾಡಿ ವಿಷಯ ತಿಳಿಸಿದಾಗ, ಅವರು ಆಯೋಗದಲ್ಲಿ ಒಂದು ದೂರು ದಾಖಲಿಸುವಂತೆ ತಿಳಿಸಿದರು.

ನಂತರ ನಾನು ಒಬ್ಬ ಪೊಲೀಸರು ಹಾಗೂ ಶ್ರೀ ಸೋಮಪ್ಪ ಗೋಡಿ ಪಿ.ಎಸ್.ಐ ರವರ ಜೊತೆ ನಾನು ಮೊದಲು ವಾಸ ವಿದ್ದ ಮನೆಗೆ ಹೋದಾಗ ಮನೆಯಲ್ಲಿ ಯಾರೋ ಬ್ಯಾಚುಲರ್ಸ್ ಇದ್ದರು. ಆದರೆ ನನ್ನ ಮನೆಯ ಸಾಮಾನುಗಳು ಯಾವುದು ಇರಲಿಲ್ಲ. ಆಗ ಪೊಲೀಸರು ನಾವು ಕರೆ ಮಾಡುತ್ತೇವೆ ಆಗ ಬನ್ನಿ ಎಂದು ಹೇಳಿದರು. ಆದರೆ ಸುಮಾರು ದಿನಗಳಾದರೂ ಯಾವುದೇ ಕ್ರಮ ಕೈಗೊಳ್ಳದೇ

ಇದ್ದದ್ದರಿಂದ ನಾನು ಪುನ: ಮಾನವ ಹಕ್ಕುಗಳ ಆಯೋಗಕ್ಕೆ ಬಂದು ದೂರು ನೀಡಿದೇನೆ.

ನಾನು ಮನೆಗೆ ಕೊಟ್ಟ ಅಡ್ವಾನ್ಸ್ ಹಣ, ಚೆಕ್, 5 ಲಕ್ಷ ರೂ ಬೆಲೆ ಬಾಳುವ ಚಿನ್ನದ ಒಡವೆಗಳು ಯಾವುದು ನನಗೆ ಕೊಟ್ಟಿಲ್ಲ. ಹಾಗೂ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಯವರಿಗೆ ನನ್ನ ಎಲ್ಲಾ ಸಾಮಾನುಗಳು ಮತ್ತು ಒಡವೆಗಳನ್ನು ಕೊಡಿಸಿಕೊಡಿ ಎಂದು ಕೇಳಿದಾಗ ಅವರು ಒಡವೆಗಳ ಒರಿಜಿನಲ್ ಬಿಲ್‌ಗಳನ್ನು ತಂದು ಕೊಡಿ ಎಂದು ಕೇಳಿದರು. ಆಗ ನಾನು ಒಡವೆಗಳನ್ನು ಕೊಂಡು ಕೊಂಡಿದ್ದ 3 ಲಕ್ಷ ರೂಗಳ ಬಿಲ್‌ಗಳನ್ನು ತಂದು ಕೊಟ್ಟಿದ್ದೇನೆ.

ಆದರೂ ಇಲ್ಲಿಯವರೆಗೂ ನನಗೆ ಮೇಲ್ಕಂಡ ಯಾವುದೇ ಸಾಮಾನುಗಳನ್ನು ವಾಪಸ್ ಕೊಡಿಸಿರುವುದಿಲ್ಲ."

ಮುಂದುವರೆದು, ಶ್ರೀಮತಿ ಪ್ರೇಮ ರವರು ಅವರ ಹೇಳಿಕೆಯಲ್ಲಿ ಶ್ರೀ ಸೋಮಪ್ಪ ಗೋಡಿ ರವರ ಮುಂದೆ ಶ್ರೀ ರಮೇಶ್ ರವರು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಬಗ್ಗೆ ದೂರು ನೀಡಿರುವುದಾಗಿ ಹೇಳಿದ್ದು, ಅದಕ್ಕೆ ಶ್ರೀ ಸೋಮಪ್ಪ ಗೋಡಿ ರವರು ಅಂತಹ ದೂರು ನೀಡಿರುವುದಿಲ್ಲವೆಂದು ಹೇಳಿದ್ದು, ಶ್ರೀಮತಿ ಪ್ರೇಮ ರವರು ಯಾವ ದೂರನ್ನು ನೀಡಿರುತ್ತಾರೆಂದು ತನಿಖೆ ನಡೆಸುವುದು ಅವಶ್ಯವಿದೆ ಎಂದು ಹಾಗೂ ವಿಚಾರಣೆ ಕಾಲದಲ್ಲಿ, ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಕರೆಸಿ ಅವರನ್ನು ಶ್ರೀಮತಿ ಪ್ರೇಮ ರವರ ದೂರಿನ ಬಗ್ಗೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿರುತ್ತಾರೆಯೇ ಎಂದು ಕೇಳಿದಾಗ ಡಿವೈ.ಎಸ್.ಪಿ ಶ್ರೀ ಕೇಶವ್ ರವರು ಶ್ರೀಮತಿ ಪ್ರೇಮ ರವರಿಗೆ ಶ್ರೀ ರಮೇಶ್‌ರವರಿಂದ ಲೈಂಗಿಕ ಕಿರುಕಳ ಉಂಟಾಗಿರುವ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ಮಾಹಿತಿ ನೀಡಿರುತ್ತಾನೆಂದು ಆಯೋಗದ ಮುಂದೆ ಹೇಳುತ್ತಾರೆ. ಅದ್ದರಿಂದ ಪೊಲೀಸ್ ಇನ್ಸ್‌ಪೆಕ್ಟರ್ ರವರು ಶ್ರೀಮತಿ ಪ್ರೇಮ ರವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ ಮೇಲೆ ಯಾವ ಕ್ರಮ ಕೈಗೊಂಡಿದ್ದಾರೆಂದು ಆಯೋಗದ ತನಿಖಾಧಿಕಾರಿ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಹಾಗೂ ತನಿಖೆ ಮಾಡುವಾಗ ಜೆ.ಪಿ. ನಗರ ಪೊಲೀಸ್ ಠಾಣೆಯ ಸಿ.ಸಿ.ಟಿ.ವಿ ಪೂಟೇಜ್‌ನ್ನು ನೋಡಬೇಕಾಗಿ ಸೂಚಿಸಿದ್ದು ಹಾಗೂ ಮುಂದಿನ ದಿನಾಂಕದಂದು ಶ್ರೀಮತಿ ಪ್ರೇಮ ಹಾಗೂ ಶ್ರೀ ಸೋಮಪ್ಪ ಗೋಡಿರವರು ಆಯೋಗದ ಮುಂದೆ ಹಾಜರಾಗಬೇಕೆಂದು ಆದೇಶಿಸಿದ್ದು, ದಿನಾಂಕ 23.07.2021 ರಂದು ಶ್ರೀಮತಿ ಪ್ರೇಮ ಹಾಗೂ ಶ್ರೀ ಸೋಮಪ್ಪ ಗೋಡಿರವರು ಆಯೋಗದ ಮುಂದೆ ಹಾಜರಾಗಿದ್ದು, ಆಯೋಗದ ಪ್ರಭಾರ ಐ.ಜಿ.ಪಿ ರವರು ವರದಿ ಸಲ್ಲಿಸಿದ್ದು, ಶ್ರೀಮತಿ ಪ್ರೇಮರವರು ಲಭ್ಯವಿಲ್ಲದ ಕಾರಣ ಅವರನ್ನು ವಿಚಾರಣೆ ಮಾಡಲು ಸಾಧ್ಯವಾಗಿಲ್ಲ ಎಂದು ವರದಿ

ನೀಡಿರುತ್ತಾರೆ. ಆದ್ದರಿಂದ ಶ್ರೀಮತಿ ಪ್ರೇಮ ರವರಿಗೆ ತನಿಖಾಧಿಕಾರಿಯವರೊಂದಿಗೆ ತನಿಖೆಗೆ ಸಹಕರಿಸಬೇಕೆಂದು ತಿಳಿಸಿದ್ದು, ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಕರೆದು 1. ಶ್ರೀಮತಿ ಪ್ರೇಮ ರವರ ಆರೋಪದ ಪ್ರಕಾರ ಶ್ರೀ ರಮೇಶ್ ರವರಿಂದ ಶ್ರೀಮತಿ ಪ್ರೇಮ ರವರ ಮೇಲೆ ಲೈಂಗಿಕ ದುರ್ವರ್ತನೆ ಆಗಿದೆಯೇ 2. ಶ್ರೀಮತಿ ಪ್ರೇಮ ರವರ ಆರೋಪದ ಪ್ರಕಾರ ಶ್ರೀ ರಮೇಶ್ ರವರು ವಶಪಡಿಸಿಕೊಂಡಿರುವ ಶ್ರೀಮತಿ ಪ್ರೇಮ ರವರ ವೈಯಕ್ತಿಕ ವಸ್ತುಗಳ ವಿಷಯದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಿರುತ್ತದೆ.

ಅದರಂತೆ, ದಿನಾಂಕ 04.09.2021 ರಂದು ಆಯೋಗದ ಮುಂದೆ ಶ್ರೀಮತಿ ಪ್ರೇಮ ಹಾಗೂ ಶ್ರೀ ಸೋಮಪ್ಪ ಗೋಡಿ ರವರು ಹಾಜರಿದ್ದು, ಶ್ರೀ ಸೋಮಪ್ಪ ಗೋಡಿ ರವರು ಅವರ ಲಿಖಿತ ಸಮಜಾಯಿಷಿ ಸಲ್ಲಿಸಿರುತ್ತಾರೆ. ಆಯೋಗದ ತನಿಖಾಧಿಕಾರಿಯಿಂದ ವರದಿ ಬಂದಿರುತ್ತದೆ.

ಆಯೋಗದ ತನಿಖಾಧಿಕಾರಿಯ ವರದಿಯಲ್ಲಿ "ಪ್ರಕರಣದಲ್ಲಿ ದೂರುದಾರರಾದ ಶ್ರೀಮತಿ ಪ್ರೇಮ.ಎಸ್.ಎಂ @ ಉಮಾದೇವಿ ಕೋಂ ನಾಗೇಂದ್ರ, ರವರ ದೂರರ್ಜಿಯಲ್ಲಿ ನಮೂದು ಮಾಡಿರುವ ನಂ. 1730, 18ನೇ ಮುಖ್ಯರಸ್ತೆ, 8ನೇ ಕ್ರಾಸ್, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು–560078 ಘಟನೆ ನಡೆದ ಸ್ಥಳಕ್ಕೆ ದೂರುದಾರರಾದ ಶ್ರೀಮತಿ ಪ್ರೇಮ.ಎಸ್.ಎಂ ರವರ ಸಮಕ್ಷಮ ಭೇಟಿ ನೀಡಿ ಪರಿಶೀಲಿಸಲಾಗಿ, ಸದರಿ ಬಿಲ್ಡಿಂಗ್‌ನಲ್ಲಿ ಶ್ರೀಮತಿ ಮಂಗಳಾದೇವಿ ಎಂಬುವವರು ವಾಸವಾಗಿದ್ದು, ಅವರನ್ನು ವಿಚಾರ ಮಾಡಲಾಗಿ, "ಶ್ರೀಮತಿ ಪ್ರೇಮ.ಎಸ್.ಎಂ ರವರು ಬಾಡಿಗೆಗಾಗಿ ಮನೆಗೆ ಬಂದ 15 ದಿನಗಳಲ್ಲಿ ರಾಜಸ್ಥಾನದಲ್ಲಿರುವ ತನ್ನ ತಾಯಿಯ ಮನೆಗೆ ಹೋಗಿದ್ದು, ಶ್ರೀಮತಿ ಪ್ರೇಮ.ಎಸ್.ಎಂ ರವರು ಮನೆಯನ್ನು ತಾವೇ ಖಾಲಿ ಮಾಡಿಕೊಂಡು ಹೋಗಿರುತ್ತಾರೋ ಅಥವಾ ಎದುರುದಾರರಾದ ಶ್ರೀ. ರಮೇಶ್ ರವರು ಖಾಲಿ ಮಾಡಿಸಿರುತ್ತಾರೋ ತನಗೆ ತಿಳಿದಿರುವುದಿಲ್ಲ" ಎಂದು ತಿಳಿಸಿರುತ್ತಾರೆ ಹಾಗೂ ಸದರಿ ಬಿಲ್ಡಿಂಗ್‌ನಲ್ಲಿ ಟೈಲರ್ ಅಂಗಡಿ ನಡೆಸಿಕೊಂಡಿರುವ ಶ್ರೀ.ಶಿವಣ್ಣ ರವರನ್ನು ದೂರುದಾರರು ಆರೋಪಿಸಿರುವ ಮಾಹಿತಿ ಬಗ್ಗೆ ವಿಚಾರ ಮಾಡಲಾಗಿ, ಅವರು "ಶ್ರೀಮತಿ ಪ್ರೇಮ.ಎಸ್.ಎಂ ರವರು ಯಾರೆಂಬುದು ತನಗೆ ಗೊತ್ತಿರುವುದಿಲ್ಲ.ಅವರು ಮನೆಯನ್ನು ಬಾಡಿಗೆಗೆ ಪಡೆದಿರುವುದಾಗಲಿ ಅಥವಾ ಮನೆಯನ್ನು ಖಾಲಿ ಮಾಡಿರುವುದಾಲಿ ತನಗೆ ತಿಳಿದಿರುವುದಿಲ್ಲ" ಎಂದು ಹೇಳಿರುತ್ತಾರೆ.

ಶ್ರೀಮತಿ ಮಂಗಳಾದೇವಿ ಮತ್ತು ಶ್ರೀ.ಶಿವಣ್ಣ ರವರುಗಳು ಹೇಳಿಕೆಗಳನ್ನು ನೀಡಲು ನಿರಾಕರಿಸಿದ್ದು, ಮೌಖಿಕವಾಗಿ ದೂರುದಾರರ ಸಮಕ್ಷಮ ನುಡಿದಿರುತ್ತಾರೆ" ಎಂಬ ವರದಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ಸೋಮಪ್ಪ ಗೋಡಿ ರವರು ಅವರ ಲಿಖಿತ ಸಮಜಾಯಿಷಿಯು ಕೆಳಕಂಡಂತಿರುತ್ತದೆ:

"... ದಿನಾಂಕ: 06-09-2019 ರಂದು ಶ್ರೀಮತಿ ಪ್ರೇಮ ಎಸ್.ಎಂ, @ ಉಮಾದೇವಿ ಕೋಂ ನಾಗೇಂದ್ರ, 2ನೇ ಹಂತ, ಜೆ.ಪಿ.ನಗರ ಬೆಂಗಳೂರು ವಾಸಿ ರವರು ಶ್ರೀ ರಮೇಶ್ ಎಂಬುವವರ ಮೇಲೆ ದೂರನ್ನು ಕೊಟ್ಟಿದ್ದು, ಸದರಿ ದೂರನ್ನು ಮೊ.ಸಂಖ್ಯೆ: 162/2019 ಕಲಂ 341-354 ಐ.ಪಿ.ಸಿ ಅಡಿ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದೆನು...

ಮೇಲ್ಕಂಡ ಪ್ರಕರಣದ ತನಿಖೆಯನ್ನು ಠಾಣೆಯ ಪಿ.ಐ ಮತ್ತು ಉಪವಿಭಾಗದ ಎ.ಸಿ.ಪಿ ರವರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಡಿ ಕೈಗೊಂಡು ತನಿಖೆಯನ್ನು ಮುಕ್ತಾಯಗೊಳಿಸಿ ದಿ: 08-12-2020 ರಂದು ನ್ಯಾಯಾಲಯಕ್ಕೆ ಅಂತಿಮ "ಬಿ" ವರದಿಯನ್ನು ಸಲ್ಲಿಸಿರುತ್ತೇನೆ...

ನನ್ನ ತನಿಖೆಯ ಕಾಲಕ್ಕೆ ಕೈಗೊಂಡ ಕ್ರಮಗಳೆಂದರೆ:-

1. ಕಲಂ 164 ಸಿ.ಆರ್.ಪಿ.ಸಿ ಅಡಿ ದೂರುದಾರರ ಹೇಳಿಕೆಯನ್ನು ದಿ: 21-09-2019 ರಂದು ಗೌ॥ 3ನೇ ಮೆಟ್ರೋ ಪಾಲಿಟನ್ ಸಂಚಾರ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ.
2. ದೂರುದಾರರಿಗೆ ದೂರಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಮತ್ತು ಸಾಕ್ಷಿಗಳ ಮಾಹಿತಿಯನ್ನು ನೀಡುವಂತೆ ದಿ: 21-10-2019, 01-11-2019 ಮತ್ತು 12-11-2019 ರಂದು ನೋಟೀಸ್ ನೀಡಿದ್ದು, ದೂರುದಾರರು ದಿ: 14-11-2019 ರಂದು ಆಭರಣಗಳ ಕೆಲವು ರಸೀದಿಗಳನ್ನು ನೀಡಿದ್ದು, ಸಾಕ್ಷಿದಾರರ ಮಾಹಿತಿಯನ್ನು ನೀಡದೆ ಉಳಿದಿದ್ದರು. ದೂರುದಾರರು ಕೃತ್ಯ ಗತಿಸಿದ ವೇಳೆಯಲ್ಲಿ ಹಾಜರಿದ್ದ ಸಾಕ್ಷಿದಾರರ ವಿವರಗಳನ್ನು ನೀಡಲು ಸಹಕರಿಸದೆ ಇದ್ದ ಕಾರಣ ದಿ: 04-01-2021 ರಂದು ತನಿಖಾಧಿಕಾರಿಯಾದ ನಾನು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟು ಸದರಿ ಬಿಲ್ಡಿಂಗ್‌ನಲ್ಲಿ ವಾಸವಿದ್ದ 03 ಜನ ಬಾಡಿಗೆದಾರರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿರುತ್ತದೆ.
3. ಪಿರ್ಯಾದುದಾರರು ತಮ್ಮ ದೂರಿನಲ್ಲಿ ನೀಡಿದ ಮೊಬೈಲ್ ನಂ. 8073114061ಕ್ಕೆ ಮತ್ತು ಆರೋಪಿ ರಮೇಶ್ ರವರು ಉಪಯೋಗಿಸುತ್ತಿದ್ದ ಮೊಬೈಲ್ ನಂ. 9886300651 ಕರೆಗಳ ಸಿ.ಡಿ.ಆರ್ ಅನ್ನು ಸಂಗ್ರಹಿಸಿಕೊಂಡು ತನಿಖೆಯ ಕಡತದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ.
4. ದಿನಾಂಕ: 12-06-2019 ರಂದು ಪಿರ್ಯಾದುದಾರರು ಆರೋಪಿ ರಮೇಶ್ ರವರಿಗೆ ಕೊಟ್ಟಿದ್ದರು ಎನ್ನಲಾದ ಬ್ಯಾಂಕ್ ಚೆಕ್‌ನ ಸಂಬಂಧವಾಗಿ ಬ್ರ್ಯಾಂಚ್ ಮ್ಯಾನೇಜರ್ ವೈ.ಹುಸನಹಳ್ಳಿ, ಕೋಲಾರ ಜಿಲ್ಲೆ ರವರಿಗೆ ಸಂಪರ್ಕಿಸಿದಾಗ ಪಿರ್ಯಾದುದಾರರ ಮೊಬೈಲ್ ಕೆನರಾ ಬ್ಯಾಂಕ್ ಕೈವಾರ ಬ್ರ್ಯಾಂಚ್‌ಗೆ ಲಿಂಕ್ ಆಗಿದ್ದು ಪತ್ತೆಯಾಯಿತು. ಅನಂತರ ಕೈವಾರ ಬ್ರ್ಯಾಂಚ್ ಬ್ಯಾಂಕ್‌ಗೆ ಸಂಪರ್ಕಿಸಲಾಗಿ ಸದರಿ ಮೊಬೈಲ್ ಮೆ॥ ಶ್ರೀ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್, ಕೈವಾರ ಬ್ರ್ಯಾಂಚ್‌ಗೆ ಲಿಂಕ್ ಆಗಿದ್ದು ತಿಳಿದು ಬಂದಿತು. ಸದರಿ ಬ್ಯಾಂಕ್ ಖಾತೆಗೆ ಉಮಾದೇವಿ ಕೋಂ ಮುನಿವೆಂಕಟಪ್ಪ

ಎಂಬುವವರು ಟ್ರಸ್ಟಿ ಸಿಗ್ನೇಚರ್ ಆಗಿ ನೊಂದಣಿ ಆಗಿದ್ದುದು ಪತ್ತೆಯಾಯಿತು. ಆ ಖಾತೆಯನ್ನು ಜನವರಿ 2019ರಲ್ಲಿ ತೆರೆದಿದ್ದು, ಯಾವುದೇ ಚೆಕ್ ಆ ಖಾತೆಯಿಂದ ಪಾಸಾಗಿರಲಿಲ್ಲ.

5. ದಿ: 09–09–2019, 15–09–2019, 16–09–2019, 21–10–2019 ರಂದು ದೂರುದಾರರಿಗೆ ಕೃತ್ಯ ಸ್ಥಳವನ್ನು ತೋರಿಸುವಂತೆ ಮತ್ತು ಮಹಜರ್‌ಗೆ ಸಹಕರಿಸುವಂತೆ ಕೋರಿದ್ದು, ಅವರು ಸಹಕರಿಸದ ಕಾರಣ ಪುನ: 28–08–2020 ಅನ್ನು ನಿಗಧಿ ಪಡಿಸಿಕೊಂಡು ಈ ದಿನಾಂಕದಂದು ಪಿರ್ಯಾದಿಯವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತದೆ.
6. ಪಿರ್ಯಾದದಾರರ ಗೃಹ ಸಾಮಾನುಗಳನ್ನು ಸಾಗಿಸಿಕೊಟ್ಟ ಟೆಂಪೋ ಡ್ರೈವರ್ ಶಿವಣ್ಣ, ಪಿರ್ಯಾದುದಾರರಿಗೆ ಮನೆ ಕೊಡಿಸಿದ ಬ್ರೋಕರ್ ದಿನೇಶ್ ಕುಮಾರ್ ರವರುಗಳ ಹೇಳಿಕೆಗಳನ್ನು ದಿ: 28.08.2020 ರಂದು ಪಡೆದುಕೊಳ್ಳಲಾಗಿರುತ್ತದೆ.
7. ಈ ಮಧ್ಯೆ ಆರೋಪಿತನು ಗೌ॥ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಬಂದು ಹಾಜರಾಗಿದ್ದು, ಆರೋಪಿತನನ್ನು ದಸ್ತಗಿರಿ ಪಡಿಸಿ ವಿಚಾರಣೆ ಮಾಡಿ ಶ್ರೀಮತಿ ಸರೋಜಮ್ಮ ಎಂಬುವವರ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತದೆ.
8. ದೂರುದಾರರು ನೀಡಿದ್ದರು ಎನ್ನಲಾದ ಬ್ಯಾಂಕ್ ಚೆಕ್‌ನ ಖಾತೆ ವಿವರಗಳನ್ನು ಠಾಣೆಯ ಹೆಚ್.ಸಿ 9153 ಅನ್ನು ನಿಯೋಜಿಸಿ ಸಂಗ್ರಹಿಸಲಾಗಿದ್ದು, ಸದರಿಯವರು ತಮ್ಮ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಬ್ಯಾಂಕ್ ಖಾತೆ ನಂಬರ್ ಮತ್ತು ಚೆಕ್ ನಂಬರನ್ನು ನೀಡದೆ ಇದ್ದು, ಅವರು ನೀಡಿದ ಮೊಬೈಲ್ ಸಂಖ್ಯೆ ಆಧಾರದ ಮೇಲೆ ಲಿಂಕ್ ಅಕೌಂಟ್ ವಿವರಗಳನ್ನು ಪಡೆದಿದ್ದು, ಸದರಿ ಮೊಬೈಲ್ ಸಂಖ್ಯೆಯು ಮೆ॥ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ಖಾತೆಗೆ ಲಿಂಗ್ ಆಗಿದ್ದ ಸಂಖ್ಯೆಯಾಗಿರುತ್ತದೆ...
9. ದೂರುದಾರರು ನೀಡಿದ ಬ್ಯಾಂಕ್ ಚೆಕ್ ಬಗ್ಗೆ ಮುಂದುವರೆದ ಹೇಳಿಕೆಯನ್ನು ದಿ: 29–11–2019 ರಂದು ಪಡೆದಿದ್ದು, ಸರಿಯಾದ ಖಾತೆ ನಂಬರ್ ಮತ್ತು ಚೆಕ್ ನಂಬರ್‌ಗಳನ್ನು ಪೂರೈಸಲು ಕೋರಿದ್ದು, ದೂರುದಾರರು ಬ್ಯಾಂಕ್ ಖಾತೆ ವಿವರಗಳನ್ನು ಪೂರೈಸದೆ ಉಳಿದಿರುತ್ತಾರೆ.
10. ಪ್ರಕರಣವನ್ನು ಎಲ್ಲಾ ಆಯಾಮಗಳಲ್ಲೂ ತನಿಖೆ ಮಾಡಿದ್ದು, ಸದರಿ ತನಿಖೆಯಲ್ಲಿ ಕಂಡು ಬಂದ ಗೊಂದಲ, ಮೊಬೈಲ್ ಕರೆಗಳು ತಾಳೆಯಾಗದ ಕಾರಣ ಪಿರ್ಯಾದುದಾರರ ದೂರನ್ನು ತನಿಖೆಯ ಕಾಲದಲ್ಲಿ ಯಾವ ಸಾಕ್ಷಿಯು ಬೆಂಬಲಿಸದ ಕಾರಣ ಮತ್ತು ಪಿರ್ಯಾದುದಾರರು ತನಿಖೆಗೆ ಸರಿಯಾಗಿ ಸಹಕರಿಸಿ ಅಪರಾಧವನ್ನು ರುಜುಮಾತು ಪಡಿಸುವುದಕ್ಕೆ ಅಗತ್ಯವಾದ ಸಾಕ್ಷ್ಯಾಧಾರವನ್ನು ಒದಗಿಸದ ಕಾರಣ ಕೆಳಕಂಡ ಅಂಶಗಳನ್ನಾಧರಿಸಿ "ಬಿ" ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. "ಬಿ" ಅಂತಿಮ ವರದಿಯನ್ನು ಸಲ್ಲಿಸುವುದಕ್ಕೆ ಉಪ ವಿಭಾಗಾಧಿಕಾರಿಗಳು ಅನುಮೋದನೆ ನೀಡಿರುತ್ತಾರೆ...

ಪಿರ್ಯಾದುದಾರರ ದೂರಿನಲ್ಲಿ ಸತ್ಯಾಂಶ ಇರುವುದಿಲ್ಲ ಎಂಬುದಕ್ಕೆ ಕೆಳಕಂಡ ತನಿಖಾಂಶಗಳು ಪೂರಕವಿರುತ್ತವೆ.

01. ಪಿರ್ಯಾದುದಾರರು ಈ ಮೊದಲು ಜೆ.ಪಿ.ನಗರ ವ್ಯಾಪ್ತಿಯಲ್ಲಿಯೆ ಬಾಡಿಗೆಗೆ ವಾಸವಾಗಿದ್ದು, ಮೆ–2019 2ನೇ ವಾರದಲ್ಲಿ ಸಾಕ್ಷಿದಾರರಾದ ಶ್ರೀ ದಿನೇಶ್ ಕುಮಾರ್ ಎಂಬ ರಿಯಲ್ ಎಸ್ಟೇಟ್ ಮಾಲೀಕ ಮೂಲಕ ಆರೋಪಿ ಎನ್ನಲಾದ ರಮೇಶ್ ರವರ ಬಿಲ್ಡಿಂಗ್ ನಂ.1730, 2ನೇ ಮಹಡಿ, 18ನೇ ಮೈನ್, ಜೆ.ಪಿ ನಗರ, 2ನೇ ಮೇನ್, ಬೆಂಗಳೂರು–78 ರ ಮನೆ ಖಾಲಿ ಇರುವುದನ್ನು ಕಂಡು ದಿ: 12–05–2019 ರಂದು ಸಂಜೆ ಮನೆಯ ಬಳಿ ಹೋಗಿ ಟೂ–ಲೆಟ್ ಬೋರ್ಡ್ ನಲ್ಲಿ ಮನೆಯ ಮಾಲೀಕ ರಮೇಶ್ ರವರ ಮೊಬೈಲ್ ನಂ. 9886300651ಗೆ ಕರೆ ಮಾಡಿ ವಿಚಾರ ಮಾಡಿರುವುದು ಕಂಡು ಬಂದಿರುತ್ತದೆ.
02. ಪಿರ್ಯಾದುದಾರರು ದಿನಾಂಕ: 14–05–2019 ರಂದು ಸದರಿ ಬಿಲ್ಡಿಂಗ್ 2ನೇ ಮಹಡಿಗೆ ಸಾಮಾನುಗಳನ್ನು ಸಾಕ್ಷಿದಾರರ ಟೆಂಪೋ ಡ್ರೈವರ್ ಶಿವಣ್ಣ ರವರ ಮೂಲಕ 2 ಬಾರಿಗೆ ಗೃಹೋಪಯೋಗಿ ಮತ್ತು ಇತರೆ ಸಾಮಾನುಗಳನ್ನು ಶಿಫ್ಟ್ ಮಾಡಿರುತ್ತಾರೆ.
03. ತದನಂತರ ಪಿರ್ಯಾದಾರರು ಮನೆಯ ಮಾಲೀಕರಿಗೆ ಬಾಡಿಗೆ ಮುಂಗಡ ನೀಡದೆ ಇದ್ದು, ಸಾಕ್ಷಿದಾರರಾದ ಶ್ರೀ ದಿನೇಶ್ ಕುಮಾರ್ ರವರು ಮಾಲೀಕರ ಸೂಚನೆ ಮೇರೆಗೆ ವಿಚಾರ ಮಾಡಲು ಹೋದಾಗ ಈ ವಿಚಾರದಲ್ಲಿ ತಲೆಹಾಕದಂತೆ ತಾಕೀತು ಮಾಡಿರುವುದು ಕಂಡು ಬಂದಿರುತ್ತದೆ.
04. ಪಿರ್ಯಾದುದಾರರು ಕೆಲವು ದಿನಗಳ ಕಾಲ ಈ ಮನೆಯಲ್ಲಿ ತಂಗಿದ್ದು, ತದನಂತರ ತಾವೇ ಮನೆಯನ್ನು ಖಾಲಿ ಮಾಡುಕೊಂಡು ಹೋಗಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಕಂಡು ಬಂದಿರುತ್ತದೆ.
05. ಇದಾದ ನಂತರ ಪಿರ್ಯಾದುದಾರರು ಯಾವುದೋ ಅಥವಾ ಯಾರದ್ದೋ ದುಷ್ಪೇರಣೆಯಿಂದ ದಿ: 25–08–2019 ರಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಈ ಬಗ್ಗೆ ಠಾಣೆಯ ಎನ್.ಸಿ ನಂ.284/2019ರಲ್ಲಿ ದೂರು ದಾಖಲಾಗಿದ್ದು ತದನಂತರ ದೂರು ನೀಡಿ ಕೇಸು ದಾಖಲಾಗುವಂತೆ ಮಾಡಿರುವುದು ಸಂಶಯದಿಂದ ಕೂಡಿದೆ.
06. ದಿ: 18–05–2019 ರಂದು 14.00 ಗಂಟೆಯಲ್ಲಿ ಆರೋಪಿ ಎನ್ನಲಾದ ರಮೇಶ್ ರವರು ಪಿರ್ಯಾದುದಾರರು ವಾಸವಾಗಿದ್ದರು ಎನ್ನಲಾದ ಮನೆಗೆ ಬಂದು ತಡೆದು ಅಸಭ್ಯವಾಗಿ ವರ್ತಿಸಿ ಹೊರಗೆ ಹೋಗದಂತ ತಡೆದು ಕೈ ಹಿಡಿದು ಎಳೆದಾಡಿದ್ದಾಗಿ ದೂರಿನಲ್ಲಿ ಆರೋಪಿಸಿದ್ದು, ತದನಂತರ ಘನ ನ್ಯಾಯಾಲಯದಲ್ಲಿ ದಾಖಲಿಸಿಕೊಂಡಿರುವ ಹೇಳಿಕೆಯಲ್ಲಿ ಸಹ ಬೆಡ್ ರೂಮ್‌ಗೆ ಎಳೆದುಕೊಂಡು ಹೋಗಲು ಪ್ರಯತ್ನಿಸಿದ್ದಾಗಿ ಆರೋಪಿಸಿರುತ್ತಾರೆ.
07. ಆದರೆ ಈ ಪ್ರಕರಣದ ಸಾಕ್ಷಿದಾರರ ಹೇಳಿಕೆಗಳಿಂದ ಬಿಲ್ಡಿಂಗ್ ಮಾಲೀಕರಾದ ರಮೇಶ್ ರವರು ಸದರಿ ದಿನಾಂಕದಂದು ಅಲ್ಲದೆ ಇದಕ್ಕೆ ಮುನ್ನಾ ದಿನಗಳಲ್ಲಿ

ಮತ್ತು ನಂತರದ ಸ್ವಲ್ಪ ದಿನಗಳಲ್ಲಿ ಸಹ ಬಿಲ್ಡಿಂಗ್ ಬಳಿ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ.

08. ಪಿರ್ಯಾದುದಾರರು ದೂರು ನೀಡುವ ಸಮಯದಲ್ಲಿ ಘಟನೆ ಜರುಗಿದ ಸಮಯ ನಮೂದಿಸದೆ ಇದ್ದು, ದಿ: 29-11-2020 ರಂದು ಮರು ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಸದರಿಯವರು ಘಟನೆ ದಿ: 18-05-2019 ರಂದು 13.00 ಗಂಟೆಯಿಂದ 15.00 ಗಂಟೆ ನಡುವೆ ಜರುಗಿದ್ದಾಗಿ ನುಡಿದಿರುತ್ತಾರೆ.

09. ಪ್ರಕರಣದ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪಿರ್ಯಾದುದಾರರು ಉಪಯೋಗಿಸುತ್ತಿದ್ದ ಮೊಬೈಲ್ ಸಂಖ್ಯೆ: 80731140461 ರ ಕರೆಗಳ ದಾಖಲಾತಿಗಳನ್ನು ಪರಿಶೀಲಿಸಿದಾಗ ಕೃತ್ಯ ನಡೆದ ದಿನಾಂಕದಂದು ಬೆಳಿಗ್ಗೆ 11.55 ಗಂಟೆಯಿಂದ ಸಂಜೆ 19.02 ಗಂಟೆವರೆಗೆ ಪಿರ್ಯಾದುದಾರರ ಕರೆಗಳ ಮಾಹಿತಿಯಲ್ಲಿ ಸೆಲ್ ಐಡಿ 4058610027032, 40586100027012, 4058610027015, 4058610027025, 40586100ಬಿಸಿ032 ಗಳನ್ನು ಪರಿಶೀಲನೆ ಮಾಡಿದಾಗ ನಂ.204, 1ನೇ ಕ್ರಾಸ್, 2ನೇ ಫೇಸ್, ಜೆ.ಪಿ ನಗರ, ಕೆ.ಎಸ್.ಆರ್.ಟಿ.ಸಿ ಲೇಔಟ್ ಬಿ.ಬಿ.ಎಂ.ಪಿ ವಾರ್ಡ್ ನಂ.57, ಬೆಂಗಳೂರು- 41ರ ಟವರ್‌ನ ವ್ಯಾಪ್ತಿಯಲ್ಲಿ ಪಿರ್ಯಾದುದಾರರು ಇರುವುದಾಗಿ ಕಂಡು ಬಂದಿರುತ್ತದೆ.

10. ಅದರಂತೆ ಆರೋಪಿ ಎನ್ನಲಾದ ರಮೇಶ್ ಎಂಬಾತನು ಉಪಯೋಗಿಸುತ್ತಿದ್ದ ಮೊಬೈಲ್ ನಂ. 9886300651 ಕರೆಗಳ ಮಾಹಿತಿಯಲ್ಲಿ ದಿ: 18-05-2019ರ ಸೆಲ್ ಐಡಿ 4048622010227706, 404862210262317, 404862210234027, 404862210215728, 404862210234636 ಗಳನ್ನು ಪರಿಶೀಲನೆ ಮಾಡಲಾಗಿ ಜಕ್ಕೂರು ಗ್ರಾಮ, ಯಲಹಂಕ ವ್ಯಾಪ್ತಿಯಲ್ಲಿ ಇರುವುದಾಗಿ ಕಂಡು ಬಂದಿರುತ್ತದೆ.

11. ಅಲ್ಲದೆ ತದನಂತರದ ದಿನಾಂಕಗಳಂದು ಅಂದರೆ ದಿ: 19.05.2019 ಮತ್ತು ದಿ: 20.05.2019 ರಂದು ಅಲ್ಲದೆ ಕೃತ್ಯ ನಡೆದಿದೆ ಎನ್ನಲಾದ ದಿನದ ಹಿಂದಿನ ಒಂದು ವಾರದಲ್ಲಿ ಸಹ ಆರೋಪಿ ಎನ್ನಲಾದ ರಮೇಶ್ ರವರು ಜೆ.ಪಿ ನಗರದ ತಮ್ಮ ಮಾಲೀಕತ್ವದ ಬಿಲ್ಡಿಂಗ್ ಬಳಿ ಬಾರದೆ ಇರುವುದು ಕಂಡು ಬಂದಿರುತ್ತದೆ.

12. ಸದರಿ ಪ್ರಕರಣದ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಫಿರ್ಯಾದುದಾರರ ಮತ್ತು ಆರೋಪಿ ಎನ್ನಲಾದ ರಮೇಶ್ ರವರ ಮೊಬೈಲ್ ನಂಬರುಗಳ ಕರೆಗಳ ಸೆಲ್ ಐಡಿ ಆಧಾರದಲ್ಲಿ ಪರಸ್ಪರ ಪ್ರತ್ಯೇಕ ಸ್ಥಳದಲ್ಲಿ ಇರುವುದು ದಾಖಲಾತಿಗಳಿಂದ ದೃಡಪಟ್ಟಿದ್ದು, ಘಟನೆ ಜರುಗದೆ ಇರುವುದು ಕಂಡು ಬಂದಿರುತ್ತದೆ.

13. ಇದಲ್ಲದೆ ಪಿರ್ಯಾದುದಾರರು ಕೃತ್ಯ ನಡೆದಿದೆ ಎಂದು ಆರೋಪಿಸಿದ ದಿನಾಂಕದಿಂದ ಸುಮಾರು 03 ತಿಂಗಳ ಅಂತರದಲ್ಲಿ ಪೊಲೀಸ್ ಠಾಣೆಗೆ ಹಾಜರಾಗಿ ದೂರು ಸಲ್ಲಿಸಿರುವುದನ್ನು ಗಮನಿಸಿದಾಗ ಪಿರ್ಯಾದುದಾರರು ಯಾವುದೋ ಅಥವಾ ಯಾರೊದೋ ದುಷ್ಪೇರಣೆಯಿಂದ ಘಟನೆ ಘಟಿಸದೆ ಇದ್ದರು ಸುಳ್ಳು ಆರೋಪ ಮಾಡಿರುವುದು ದೃಡಪಟ್ಟಿರುತ್ತದೆ.

14. ಪ್ರಕರಣದ ಪಿರ್ಯಾದುದಾರರು ಎನ್.ಸಿ.ಆರ್ ದೂರಿನಲ್ಲಿ ಮತ್ತು ದಿ:06.09.2019 ರಂದು ನೀಡಿದ ದೂರಿನಲ್ಲಿ ದಿ: 12.05.2019 ರಂದು ರೂ. 20000/–ಗಳನ್ನು ಮುಂಗಡವಾಗಿ ಮನೆಯ ಮಾಲೀಕರಾದ ರಮೇಶ್ ರವರಿಗೆ ನೀಡಿದ್ದಾಗಿ ಆರೋಪಿಸಿದ್ದು, ಅದರೆ ಆರೋಪಿ ಎನ್ನಲಾದ ರಮೇಶ್ ರವರು ಕರೆಗಳ ಮಾಹಿತಿಗಳನ್ನು ಪರಿಶೀಲಿಸಲಾಗಿ ಜಕ್ಕೂರಿನಲ್ಲಿ ಇರುವುದು ದೃಢಪಟ್ಟಿರುತ್ತದೆ.
15. ತದನಂತರ ಪಿರ್ಯಾದುದಾರರು ಎನ್.ಸಿ.ಆರ್ ದೂರಿನಲ್ಲಿ ದಿ: 26.05.2019 ರಂದು ಮುಂಗಡ ರೂ. 30000/–ಗಳನ್ನು ಆರೋಪಿ ಎನ್ನಲಾದ ರಮೇಶ್ ರವರ ಬ್ಯಾಂಕ್ ಖಾತೆಗೆ ಹಾಕಿದ್ದಾಗಿ ತಿಳಿಸಿದ್ದು, ಆರೋಪಿ ಎನ್ನಲಾದ ಬ್ಯಾಂಕ್ ಪಾಸ್ ಬುಕ್ ಪರಿಶೀಲನೆ ಮಾಡಿದಾಗ ಸದರಿ ದಿನಾಂಕದಂದು ಯಾವುದೇ ಬ್ಯಾಂಕ್ ವ್ಯವಹರಣೆ ಆಗದೆ ಇರುವುದು ಕಂಡು ಬಂದಿರುತ್ತದೆ.
16. ಪಿರ್ಯಾದುದಾರರು ಪ್ರಕರಣ ದಾಖಲಿಸಿದ ದೂರಿನಲ್ಲಿ ರೂ. 30000/– ಮುಂಗಡ ಹಣವನ್ನು ಕೆನರಾ ಬ್ಯಾಂಕ್, ವೈ.ಹುಣಸೇನಹಳ್ಳಿಯ ಶಾಖೆಯ ತಮ್ಮ ಉಳಿತಾಯ ಖಾತೆಯ ಚೆಕ್ ಮೂಲಕ ದಿ: 26.05.2019 ಕ್ಕೆ ನಮೂದಿಸಿ ನೀಡಿದ್ದಾಗಿ ಆರೋಪಿಸಿರುತ್ತಾರೆ. ಆದರೆ ಎನ್.ಸಿ.ಆರ್ ದೂರಿನಲ್ಲಿ ಬ್ಯಾಂಕ್ ಖಾತೆಗೆ ಹಾಕಿದ್ದಾಗಿ ತಿಳಿಸಿದ್ದು, ಪಿರ್ಯಾದುದಾರರು ಉದ್ದೇಶ ಪೂರ್ವಕವಾಗಿ ಆರೋಪಿ ಎನ್ನಲಾದ ರಮೇಶ್ ರವರ ಮೇಲೆ ಯಾವುದೋ ದುರುದ್ದೇಶದಿಂದ ಸುಳ್ಳು ದೂರು ಸಲ್ಲಿಸಿರುವುದು ಕಂಡು ಬರುತ್ತದೆ.
17. ಪ್ರಕರಣದ ಪಿರ್ಯಾದುದಾರರು ದೂರಿನಲ್ಲಿ ಕೆನರಾ ಬ್ಯಾಂಕ್ ಚೆಕ್ ನಂಬರ್ ಮತ್ತು ಖಾತೆಯ ವಿವರಗಳನ್ನು ನಮೂದಿಸದೆ ಇದ್ದು, ಅಲ್ಲದೆ ನೋಟೀಸ್ ಮೂಲಕ ತಿಳಿಸಿದ್ದರೂ ಸಹ ಸದರಿಯವರು ಕೆನರಾ ಬ್ಯಾಂಕ್ ಚೆಕ್ ನಂಬರ್ ಮತ್ತು ಖಾತೆಯ ವಿವರಗಳನ್ನು ತನಿಖೆಗೆ ಹಾಜರುಪಡಿಸಿರುವುದಿಲ್ಲ.
18. ಪಿರ್ಯಾದುದಾರರು ಎನ್.ಸಿ.ಆರ್ ದೂರಿನಲ್ಲಿ ತಿಳಿಸಿದ್ದ ವೈ.ಹುಣಸನಹಳ್ಳಿ ಬ್ರಾಂಚ್ ಕೆನರಾ ಬ್ಯಾಂಕ್ ಬ್ರ್ಯಾಂಚ್ ಮ್ಯಾನೇಜರ್ ರವರಿಗೆ ಪಿರ್ಯಾದುದಾರರು ಹೆಸರು ಮತ್ತು ಮೊಬೈಲ್ ನಂಬರ್ ಮೇರೆಗೆ ಉಳಿತಾಯ ಖಾತೆ ಪತ್ತೆ ಮಾಡಿ ಸ್ಟೇಟ್‌ಮೆಂಟ್ ಪಡೆಯಲು ಈ–ಮೇಲ್ ಮೂಲಕ ಪತ್ರ ವ್ಯವಹಾರ ಮಾಡಿದ್ದು, ಸದರಿ ಮೊಬೈಲ್ ನಂಬರ್ ಕೈವಾರ ಬ್ರಾಂಚ್‌ನಲ್ಲಿ ಲಿಂಕ್ ಆಗಿರುವುದಾಗಿ ಮಾಹಿತಿ ನೀಡಿದ್ದು ಪಿರ್ಯಾದುದಾರರು ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಿರುತ್ತದೆ.
19. ದಿ: 27–11–2019 ರಂದು ಖುದ್ದು ಸಿಬ್ಬಂದಿಯವರು ಬ್ರಾಂಚ್ ಮ್ಯಾನೇಜರ್, ಕೆನರಾ ಬ್ಯಾಂಕ್, ವೈ. ಹುಣಸನಳ್ಳಿಗೆ ಭೇಟಿ ನೀಡಿ ವಿಚಾರ ಮಾಡಿದಾಗ ಪಿರ್ಯಾದುದಾರರು ನೀಡಿರುವ ಮೊಬೈಲ್ ನಂಬರ್ ಕೈವಾರ ಬ್ರಾಂಚ್‌ನಲ್ಲಿ ಲಿಂಕ್ ಆಗಿರುವುದಾಗಿ ತಿಳೀಸಿದ ಮೇರೆಗೆ ಸದರಿಯವರು ಬ್ರಾಂಚ್ ಮ್ಯಾನೇಜರ್ ಕೆನರಾ ಬ್ಯಾಂಕ್ ಕೈವಾರ ಬ್ರಾಂಚ್ ನವರನ್ನು ಭೇಟಿ ಮಾಡಿದಾಗ ಸದರಿ ಮೊಬೈಲ್ ನಂ.8073114061 ಮೇ॥ ಶ್ರೀ ಚೌಡೇಶ್ವರಿ ದೇವಸ್ಥಾನ ಸೇವಾ ಟ್ರಸ್ಟ್‌ರ ಖಾತೆಗೆ ಲಿಂಕ್ ಆಗಿದ್ದು, ಉಮಾದೇವಿ ಕೋಂ ಮುನಿವೆಂಕಟಪ್ಪ ಎಂಬ ಟ್ರಸ್ಟಿ ಮತ್ತು

ಆಥರೈಸ್ಡ್ ಸಿಗ್ನೇಟರಿ ಹೆಸರಿನಲ್ಲಿದ್ದು, ಈ ಖಾತೆ ಜನವರಿ 2019ರಲ್ಲಿ ತೆರೆದಿದ್ದು, ಈವರೆಗೆ ಯಾವುದೇ ಚೆಕ್ ಪಾಸ್ ಆಗಿರುವುದಿಲ್ಲ ಎಂಬ ಪತ್ರದ ಮುಖೇನ ತಿಳಿಸಿರುತ್ತಾರೆ.

20. ಅಲ್ಲದೇ ಪಿರ್ಯಾದುದಾರರು ದೂರು ನೀಡಿದ ನಂತರ ತನಿಖೆ ಸಲುವಾಗಿ ಯಾವುದೇ ಪೂರಕ ದಾಖಲಾತಿಗಳು ಮತ್ತು ಸಾಕ್ಷಿದಾರರ ವಿವರಗಳನ್ನು ಹಾಜರು ಪಡಿಸುವ ಕೃತ್ಯ ಜರುಗಿದೆ ಇದ್ದರು ಸಹ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗರಲ್ಲಿ ಅರ್ಜಿಗಳನ್ನು ನೀಡಿ ತನಿಖಾಧಿಕಾರಿಯ ಮೇಲೆ ಒತ್ತಡ ತಂತ್ರ ಅನುಸರಿಸಿರುತ್ತಾರೆ.

21. ಈ ಪ್ರಕರಣದ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ಪಿರ್ಯಾದುದಾರರ ಮತ್ತು ಆರೋಪಿ ಎನ್ನಲಾದ ರಮೇಶ್ ರವರ ಮೊಬೈಲ್ ನಂಬರ್‌ಗಳ ಕರೆಗಳ ಮಾಹಿತಿಗಳನ್ನು ಸಂಬಂಧಪಟ್ಟ ಸರ್ವೀಸ್ ಪ್ರವೈಡರ್‌ಗಳಿಂದ ಸಹ ಪಡೆದು ಪರಿಶೀಲನೆ ಮಾಡಿದಾಗ ಪಿರ್ಯಾದುದಾರರು ದೂರಿನಲ್ಲಿ ಕೃತ್ಯ ನಡೆದಿದೆ ಎನ್ನಲಾದ ದಿನಾಂಕದಂದು ಫಿರ್ಯಾದುದಾರರು ಮತ್ತು ಆರೋಪಿ ಎನ್ನಲಾದ ರಮೇಶ್ ರವರು ಪರಸ್ಪರ ವಿಭಿನ್ನ ಪ್ರದೇಶಗಳಲ್ಲಿ ಇರುವುದು ದೃಢಪಟ್ಟಿದ್ದು ಘಟನೆ ಜರುಗದೆ ಇದ್ದರು ಸಹ ಸುಳ್ಳು ಆರೋಪ ಮಾಡಿ ಸುಳ್ಳು ದೂರು ದಾಖಲಿಸಿರುವುದು ದೃಡಪಟ್ಟಿರುತ್ತದೆ.

ಆಯೋಗದ ದೂರುದಾರರು ಪ್ರಕರಣದ ತನಿಖಾಧಿಕಾರಿಯಾಗಿದ್ದ ನನ್ನ ಮೇಲೆ ಮಾಡಿರುವ ಆಪಾದನೆಗಳಲ್ಲಿ ಸತ್ಯ ಇರುವುದಿಲ್ಲ. ಸದರಿಯವರು ತನಿಖಾಧಿಕಾರಿಯಾಗಿದ್ದ ನಾನು ಆರೋಪಿತರ ಬಗ್ಗೆ ಒಲವು ಹೊಂದಿರುವವರನೇ ಸಾಕ್ಷಿಗಳನ್ನಾಗಿ ಗುರ್ತಿಸಿ ಅವರ ಹೇಳಿಕೆ ಮಾಡಿರುತ್ತೇನೆ ಮತ್ತು ಸಿ.ಸಿ. ಟಿವಿ ಪರಿಶೀಲನೆ ಮಾಡಿರುವುದಿಲ್ಲ. ಹಾಗೂ ತನ್ನ ಮೊಬೈಲ್‌ನಲ್ಲಿರುವ ಟ್ಯಾಪಿಂಗ್‌ಳನ್ನು ತೆಗೆದುಕೊಂಡಿರುವುದಿಲ್ಲ ಇತ್ಯಾದಿಯಾಗಿ ಮಾಡಿರುವ ಆಪಾದನೆಗಳು ಸತ್ಯ ಇರುವುದಿಲ್ಲ. ಸದರಿ ಕಟ್ಟಡದಲ್ಲಿ ತನಿಖೆಗೆ ಭೇಟಿ ಕೊಟ್ಟಾಗ ಅಲ್ಲಿ ಯಾವುದೇ ಸಿ.ಸಿ. ಟಿವಿ ಅಳವಡಿಸಿರುವುದು ಕಂಡು ಬರಲಿಲ್ಲ. ದೂರುದಾರರು ತನ್ನ ಮೊಬೈಲ್‌ಅನ್ನು ಹಾಜರು ಪಡಿಸಿಕೊಂಡಿರುವುದಿಲ್ಲ. ಪ್ರಶ್ನಿತ ಮೊಬೈಲ್‌ಗಳ ನಡುವೆ ಒಳ ಮತ್ತು ಹೊರ ಕರೆಗಳು ಹರಿದಾಡಿರುವುದು ಸಿ.ಡಿ.ಆರ್ ನಿಂದ ಪತ್ತೆಯಾಗಿರುವುದಿಲ್ಲ. ಫಿರ್ಯಾದುದಾರರು ಯಾವುದೇ ಎಸ್.ಎಮ್.ಎಸ್ / ವಾಯ್ಸ್ ರೆಕಾರ್ಡಿಂಗ್ ಮಾಡಿಕೊಂಡಿದ್ದ ದಾಖಲೆಯನ್ನು ಸಹ ಪ್ರಕರಣ ಗತಿಸಿತ್ತು ಎನ್ನಲಾದ ಸುಮಾರು 4 ತಿಂಗಳ ನಂತರ ಕೊಟ್ಟಿದ್ದಾಗಿರುತ್ತದೆ. ಸತ್ಯಾಂಶಗಳಿಲ್ಲದ ಆಯೋಗದ ದೂರುದಾರ ಶ್ರೀಮತಿ ಪ್ರೇಮ ರವರ ದೂರಿನ ಆಪಾದನೆಗಳನ್ನು ತಳ್ಳಿಹಾಕಿ ಪ್ರಾಮಾಣಿಕ ತನಿಖೆ ನಡೆಸಿರುವ ನನಗೆ ಸುಳ್ಳುಉ ಆಪಾದನೆಗಳಿಂದ ಮುಕ್ತಗೊಳಿಸಬೇಕೆಂದು ಪ್ರಾರ್ಥಿಸುವೆನು.”

ಮುಂದುವರೆದು, ದಿನಾಂಕ 04.09.2021 ರಂದು ಶ್ರೀಮತಿ ಪ್ರೇಮ ರವರು ಈ ಹಿಂದೆ ಆಯೋಗದ ಮುಂದೆ ನೀಡಿದ ಹೇಳಿಕೆಯಲ್ಲಿ ದಿನಾಂಕ 18–05–2019 ರಂದು ನಡೆದ ಘಟನೆಯ ಬಗ್ಗೆ ಜೆ.ಪಿ.ನಗರ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು, ಪಿ.ಎಸ್.ಐ. ಶ್ರೀ ಸೋಮಪ್ಪ ಗೋಡಿ ರವರು ದೂರನ್ನು ಸ್ವೀಕರಿಸಲು ನಿರಾಕರಿಸಿ ಬದಲಿಗೆ ಆಕೆಯನ್ನು ಪ್ರಶ್ನಿಸಿರುತ್ತಾರೆಂದು ಹಾಗೂ ಈ ಘಟನೆಯ ಬಗ್ಗೆ ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಭೇಟಿ ಮಾಡಿದ್ದು, ಡಿವೈ.ಎಸ್.ಪಿ ಶ್ರೀ ಕೇಶವ್ ರವರು ಜೆ.ಪಿ.ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ಕರೆ ಮಾಡಿದ ನಂತರ ಠಾಣೆಯಲ್ಲಿ ಅಸಂಜ್ಞೇಯ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆಂದು ಹಾಗೂ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಮತ್ತೆ ಭೇಟಿ ಮಾಡಿದ್ದು, ಡಿವೈ.ಎಸ್.ಪಿ ಶ್ರೀ ಕೇಶವ್ ರವರು ಎರಡನೇ ಸಲ ಜೆ.ಪಿ.ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ಕರೆ ಮಾಡಿದ ಮೇಲೆ ಎಫ್.ಐ.ಆರ್ ದಾಖಲು ಮಾಡಿಕೊಂಡಿರುತ್ತಾರೆಂದು ಹಾಗೂ ತನ್ನ ಮನೆಯ ಸಾಮಾಗ್ರಿಗಳನ್ನು ಶ್ರೀ ರಮೇಶ್ ರವರು ತೆಗೆದುಕೊಂಡಿರುತ್ತಾರೆಂದು ಹೇಳಿದಾಗ ಜೆ.ಪಿ.ನಗರ ಪೊಲೀಸ್ ರವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಬದಲಿಗೆ ತನ್ನ ಮೇಲೆಯೇ ಸಂಶಯಪಟ್ಟರೆಂದು ಹೇಳಿರುವ ಬಗ್ಗೆ ಹಾಗೂ ದಿನಾಂಕ 18–05–2019ರ ಘಟನೆಯ ಬಗ್ಗೆ ಶ್ರೀ ಸೋಮಪ್ಪ ಗೋಡಿ ಹಾಗೂ ಜೆ.ಪಿ.ನಗರ ಪೊಲೀಸರು ಯಾವ ಕ್ರಮ ತೆಗೆದುಕೊಂಡಿರುತ್ತಾರೆಂದು ತನಿಖೆ ಮಾಡಿ ವರದಿ ಸಲ್ಲಿಸುವಂತೆ ಆಯೋಗದ ಎ.ಡಿ.ಜಿ.ಪಿ ರವರಿಗೆ ಸೂಚಿಸಿದ್ದು, ಅದರಂತೆ ಆಯೋಗದ ಎ.ಡಿ.ಜಿ.ಪಿ. ರವರು ದಿನಾಂಕ 25–01–2022 ರ ಪತ್ರದನ್ವಯ ಸಲ್ಲಿಸಿರುವ ವರದಿಯಲ್ಲಿ "ಈ ಹೆಚ್.ಆರ್.ಸಿ ಪ್ರಕರಣದ ವಿಚಾರಣಾ ಕಾಲದಲ್ಲಿ ದೂರುದಾರರಾದ ಶ್ರೀಮತಿ.ಪ್ರೇಮ.ಎಸ್.ಎಂ @ ಉಮಾದೇವಿ ರವರು ಮನೆಯ ಮಾಲೀಕರಾದ ರಮೇಶ್ ರವರು ತನ್ನೊಂದಿಗೆ ಅಸಭ್ಯ ಮತ್ತು ಅಶ್ಲೀಲವಾಗಿ ನಡೆದುಕೊಂಡು ತಾನು ನೀಡಿದ್ದ ಮುಂಗಡ ಹಣ ಮತ್ತು ಚೆಕ್ ಹಾಗೂ ಮನೆಯ ವಸ್ತುಗಳನ್ನು ತನಗೆ ನೀಡುತ್ತಿಲ್ಲ ಎಂದು ಆಪಾದಿಸಿ ಹೇಳಿಕೆ ನೀಡಿರುತ್ತಾರೆ.ಆಯೋಗದ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಶ್ರೀ.ಕೇಶವ್.ಕೆ.ಈ ರವರು ಜೆ.ಪಿ ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಿಗೆ ದೂರುದಾರರ ದೂರನ್ನು ಸ್ವೀಕರಿಸಿ ಕ್ರಮ ಕೈಗೊಳ್ಳುವಂತೆ ದೂರವಾಣಿ ಮುಖಾಂತರ ತಿಳಿಸಿರುತ್ತಾರೆ ಹಾಗೂ ದೂರುದಾರರಿಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ದೂರು ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಸಲಹೆ ಕೊಟ್ಟಿರುತ್ತಾರೆಂದು ಹೇಳಿಕೆ ನೀಡಿರುತ್ತಾರೆ. ಜೆ.ಪಿ ನಗರ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ದೂರುದಾರರು ನೀಡಿದ ದೂರನ್ನು

ಪಡೆದು ಪ್ರಕರಣ ದಾಖಲು ಮಾಡಿ ತನಿಖೆ ಕೈಗೊಂಡಿದ್ದು, ತನಿಖೆ ವೇಳೆಯಲ್ಲಿ ದೂರುದಾರರು ಆರೋಪಕ್ಕೆ ಸಂಬಂಧಿಸಿದಂತೆ ಯಾವುದೆ ಸಾಕ್ಷ್ಯಾದಾರ ಮತ್ತು ದಾಖಲೆಗಳನ್ನು ಒದಗಿಸದೆ ಇದ್ದು, ಆರೋಪವು ರುಜುವಾತು ಆಗದಿರುವುದರಿಂದ ದೂರುದಾರರ ಪ್ರಕರಣದಲ್ಲಿ 'ಬಿ' ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಹಾಗೂ ದೂರುದಾರರು ತಮ್ಮ ವಿರುದ್ದ ಸುಳ್ಳು ಆರೋಪ ಮಾಡಿದ್ದು, ಸತ್ಯಕ್ಕೆ ದೂರವಾಗಿರುತ್ತದೆ ಎಂದು ಹೇಳಿಕೆಗಳನ್ನು ನೀಡಿದ್ದು, ಹೇಳಿಕೆಗಳಿಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ದೂರುದಾರರು ಈ ಹಿಂದೆ ವಾಸವಿದ್ದ ಮನೆಯ ಮಾಲೀಕರಾದ ಶ್ರೀ.ತೇಜಸ್ ಮತ್ತು ದೂರುದಾರರ ಮನೆಯ ವಸ್ತುಗಳನ್ನು ಶಿಫ್ಟ್ ಮಾಡಿದ್ದ 307 ಟೆಂಪೋ ವಾಹನದ ಚಾಲಕರಾದ ಶ್ರೀ.ಶಿವಣ್ಣ ರವರುಗಳು ಶ್ರೀ.ರಮೇಶ್ ರವರ ಮನೆಯನ್ನು ದೂರುದಾರರು ಬಾಡಿಗೆಗೆ ಪಡೆದುಕೊಂಡ ನಂತರ ಹಿಂದೆ ವಾಸವಾಗಿದ್ದ ತಮ್ಮ ಮನೆಯಿಂದ ಅವರ ಮನೆಯಲ್ಲಿದ್ದ ವಸ್ತುಗಳಾದ ಸೋಫಾ, ಮಂಚ, ಅಡುಗೆ ಪಾತ್ರೆಗಳು, ವಾಷಿಂಗ್ ಮೆಷಿನ್, ಫ್ರಿಡ್ಜ್, ಗ್ಯಾಸ್ ಸಿಲಿಂಡರ್, 2 ದಿವಾನ ಸೋಫಾಗಳು, ಟೈಲರಿಂಗ್‌ನ 5 ಜಿಕ್ಕಿ ಮೆಷೀನ್‌ಗಳು, ಬಟ್ಟೆ ಹಾಗೂ ಇತ್ಯಾದಿಯಾಗಿ ಎಲ್ಲಾ ವಸ್ತುಗಳನ್ನು ಹೊಸ ಮನೆಗೆ ತೆಗೆದುಕೊಂಡು ಹೋಗಿ ಶಿಫ್ಟ್ ಮಾಡಿರುತ್ತಾರೆ ಎಂದು ಹೇಳಿಕೆಗಳನ್ನು ನೀಡಿರುತ್ತಾರೆ. ಮನೆಯ ಮಾಲೀಕರಾದ ಶ್ರೀ.ರಮೇಶ್ ಮತ್ತು ಟೈಲರ್ ಶ್ರೀ.ಶಿವಣ್ಣ ರವರುಗಳು ದೂರುದಾರರು ಯಾವುದೇ ಮುಂಗಡ ಹಣ ಅಥವಾ ಚೆಕ್‌ನ್ನು ತಮಗೆ ನೀಡಿ ಬಾಡಿಗೆಗೆ ಮನೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ದೂರುದಾರರು ತಮ್ಮ ಮನೆಯ ವಸ್ತುಗಳನ್ನು ತಮ್ಮ ಮನೆಯಲ್ಲಿ ಇಟ್ಟಿರುವ ಬಗ್ಗೆಯಾಗಲಿ ಮತ್ತು ಸದರಿ ವಸ್ತುಗಳನ್ನು ಅಲ್ಲಿಂದ ಸ್ಥಳಾಂತರಿಸಿರುವ ಬಗ್ಗೆಯಾಗಲಿ ತಮಗೆ ತಿಳಿದಿರುವುದಿಲ್ಲ ಎಂದು ಹೇಳಿಕೆಗಳನ್ನು ನೀಡಿರುತ್ತಾರೆ. ಆದ್ದರಿಂದ, ಮೇಲ್ಕಂಡ ದೂರು ಅರ್ಜಿಯ ವಿಚಾರಣಾ ಕಾಲದಲ್ಲಿ ದಾಖಲಿಸಿದ ಹೇಳಿಕೆಗಳು ಮತ್ತು ಸಂಗ್ರಹಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ದೂರುದಾರರು ಈ ಹಿಂದೆ ವಾಸವಿದ್ದ ಮನೆಯಿಂದ ಹೊಸ ಮನೆಗೆ ತಮ್ಮ ವಸ್ತುಗಳನ್ನು ಶಿಫ್ಟ್ ಮಾಡಿರುವ ಬಗ್ಗೆ ಇಬ್ಬರ ಸಾಕ್ಷೀದಾರರ ಹೇಳಿಕೆಗಳಲ್ಲಿ ಕಂಡುಬಂದಿದ್ದು, ಸದರಿ ಮನೆಯ ವಸ್ತುಗಳನ್ನು ಬಾಡಿಗೆ ಇದ್ದ ಮನೆಯಿಂದ ಬೇರೆಡೆಗೆ ಶಿಫ್ಟ್ ಮಾಡಿರುವ ಬಗ್ಗೆ ಯಾವುದೇ ಸಾಕ್ಷಿಗಳು ಕಂಡುಬಂದಿರುವುದಿಲ್ಲ ಎಂಬ ವರದಿಯೊಂದಿಗೆ ದೂರುದಾರರು, ಜೆ.ಪಿ ನಗರ ಪೋಲೀಸ್ ಠಾಣಾ ಅಧಿಕಾರಿಗಳು, ಮನೆಯ ಮಾಲೀಕರು, ನೆರೆಹೊರೆಯವರು, ಟೆಂಪೋ ಚಾಲಕರು ಮತ್ತು ಬ್ರೋಕರ್ ರವರುಗಳ ಹೇಳಿಕೆಗಳು ಮತ್ತು ದಾಖಲಾತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಆಯೋಗಕ್ಕೆ ಸಲ್ಲಿಸಿದೆ." ಎಂದು ವರದಿ ನೀಡಿರುತ್ತಾರೆ.

ದಿನಾಂಕ 31-03-2022 ರಂದು ಆಯೋಗವು ಸದರಿ ವರದಿಯನ್ನು ಪರಿಶೀಲಿಸಿದ ನಂತರ, ಪೊಲೀಸ್ ಇನ್ಸ್‌ಪೆಕ್ಟರ್, ಜೆ.ಪಿ. ನಗರ ಪೊಲೀಸ್ ಠಾಣೆ, ಬೆಂಗಳೂರು ರವರಿಗೆ ಶ್ರೀಮತಿ ಪ್ರೇಮ ರವರ ದೂರನ್ನು ಸ್ವೀಕರಿಸಲು ತಡಮಾಡಿ ಕರ್ತವ್ಯ ಲೋಪವಾಗಿರುವುದರಿಂದ ಅವರ ಲಿಖಿತ ಸಮಜಾಯಿಷಿ ಏನಾದರೂ ಇದ್ದರೇ ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಪೊಲೀಸ್ ಇನ್ಸ್‌ಪೆಕ್ಟರ್, ಜೆ.ಪಿ. ನಗರ ಪೊಲೀಸ್ ಠಾಣೆ, ಬೆಂಗಳೂರು ರವರು ಹಿಂದೆ ಪ್ರಭಾರದಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ರವರ ಜೊತೆ ಈ ವಿಚಾರ ವಿನಿಮಯ ಮಾಡಿಕೊಂಡು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಅದ್ದರಿಂದ, ಹಿಂದಿನ ಜೆ.ಪಿ. ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ ಕೆ. ಆರ್., ಹಾಲಿ ಪಿ.ಐ. ಸುಬ್ರಮಣ್ಯಪುರ ಪೊಲೀಸ್ ಠಾಣೆ ರವರಿಗೆ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ ಕಲಂ 16 ರ ಅಡಿ ನೋಟೀಸ್ ಜಾರಿ ಮಾಡಿದ್ದು, ಅದರಂತೆ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ಮಂಜುನಾಥ ಕೆ.ಆರ್. ರವರ ಲಿಖಿತ ಸಮಜಾಯಿಷಿಯು ಕೆಳಕಂಡಂತಿರುತ್ತದೆ:

> "...ಮಾನ್ಯರ ಕಛೇರಿಯಿಂದ ಹೊರಡಿಸಿರುವ ಆದೇಶಕ್ಕೆ ಸಂಬಂಧಪಟ್ಟಂತೆ ಜೆ.ಪಿ.ನಗರ ಠಾಣೆಯ ಕಡತವನ್ನು ಪರಿಶೀಲಿಸಿರುತ್ತದೆ.
>
> ಇದಕ್ಕೆ ಸಂಬಂಧಪಟ್ಟಂತೆ ಘನ ಆಯೋಗದಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಶ್ರೀಮತಿ ಪ್ರೇಮ ಎಸ್.ಎಂ. @ ಉಮಾದೇವಿ ಕೋಂ ನಾಗೇಂದ್ರ ರವರು ದಿನಾಂಕ: 25-08-2019 ರಂದು ಖುದ್ದಾಗಿ ಠಾಣೆಗೆ ಹಾಜರಾಗಿ ನೀಡಿದ ದೂರೇನೆಂದರೆ, ದಿನಾಂಕ: 12-05-2019 ರಂದು ಜೆ.ಪಿ.ನಗರ 2ನೇ ಹಂತದಲ್ಲಿರುವ ರಮೇಶ್ ಎನ್ ರವರ ಮನೆಯನ್ನು ಬಾಡಿಗೆಗೆ ಪಡೆದುಕೊಂಡಿರುತ್ತೇನೆ. ಮುಂಗಡವಾಗಿ ರೂ.20,000/- ನಗದು ಹಣವನ್ನು ಕೊಟ್ಟಿರುತ್ತೇನೆ ಹಾಗೂ ರೂ.30,000/- ಗಳ ಚೆಕ್ ಅನ್ನು ಕೊಟ್ಟಿರುತ್ತೇನೆ. ನಂತರ ಮನೆಯ ಮಾಲೀಕರು ಚೆಕ್ ವಿಷಯ ಮಾತನಾಡಲು ಬಂದು ತನಗೆ ಅಸಭ್ಯವಾಗಿ ವರ್ತಿಸಿರುತ್ತಾರೆ. ಮನೆಯನ್ನು ಬದಲಾಯಿಸುತ್ತೇನೆಂದು ಹೇಳಿದ್ದರಿಂದ ಶ್ರೀ ರಮೇಶ್ ಎನ್ ರವರು ಮನೆಯಲ್ಲಿದ್ದ ಸಾಮಾನುಗಳು, ದಾಖಲಾತಿಗಳು ಹಾಗೂ ಇತರೆ ವಸ್ತುಗಳನ್ನು ಕೊಡದೆ ತೊಂದರೆ ಕೊಟ್ಟಿರುತ್ತಾರೆ. ಇವರನ್ನು ಠಾಣೆಗೆ ಕರೆಯಿಸಿ ತನಗೆ ಸಂಬಂಧಪಟ್ಟ ಮನೆಯ ಸಾಮಾನುಗಳು, ಮುಂಗಡ ಹಣ ಹಾಗೂ ಇತರೆ ವಸ್ತುಗಳನ್ನು ಕೊಡಿಸಿ ತಮ್ಮ ತಂಟೆಗೆ ಬಾರದಂತೆ ಸೂಕ್ತ ತಿಳುವಳಿಕೆ ನೀಡಬೇಕೆಂದು ಕೊಟ್ಟ ದೂರನ್ನು ಜೆ.ಪಿ ನಗರ ಪೊಲೀಸ್ ಠಾಣೆಗೆ ಹೆಚ್‌ಸಿ ಶ್ರೀ ಅಶ್ವಥನಾರಾಯಣ ರವರು ಪಡೆದು ಠಾಣಾ ಎನ್.ಸಿ. ಸಂ.284/2019 ರೀತ್ಯಾ ದಾಖಲು ಮಾಡಿಕೊಂಡು ಎದುರಾಳಿಯನ್ನು ಕರೆದು ವಿಚಾರಣೆ ಮಾಡುವುದಾಗಿ ತಿಳಿಸಿದ್ದು, ಆದರೆ ಅರ್ಜಿದಾರರು ನಂತರ ದಾಖಲಾತಿಗಳನ್ನು ತೆಗೆದುಕೊಂಡು ಬರುವುದಾಗಿ ತಿಳಿಸಿ ಹೋಗಿರುತ್ತಾರೆ. ನಂತರ

ದಿನಾಂಕ: 06-09-2019 ರಂದು ಅರ್ಜಿದಾರರು ಠಾಣೆಗೆ ಹಾಜರಾಗಿ, ನಾನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಭೇಟಿ ನೀಡಿದ್ದು, ಎನ್.ಸಿ.ಆರ್. ನಲ್ಲಿ ವಿಚಾರಣೆ ಮಾಡುವುದು ಬೇಡ, ಎಫ್ಐಆರ್ ದಾಖಲಿಸಿಕೊಳ್ಳುವಂತೆ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಆರಕ್ಷಕ ಉಪಾಧೀಕ್ಷಕ, ಶ್ರೀ ಕೇಶವ್ ರವರಿಂದ ಜೆ.ಪಿ. ನಗರ ಆರಕ್ಷಕ ಠಾಣೆಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಆದ್ದರಿಂದ ಆಯೋಗದ ಆದೇಶದ ಮೇರೆಗೆ ಹಾಗೂ ಅರ್ಜಿದಾರರ ಮನವಿಯ ಮೇರೆಗೆ ದೂರನ್ನು ದಾಖಲಿಸಿ ತನಿಖೆ ಕೈಗೊಳ್ಳುವಂತೆ ಪಿಎಸ್ಐ ರವರಿಗೆ ಸೂಚಿಸಿದ್ದು, ಅದರಂತೆ ಪಿಎಸ್ಐ ಶ್ರೀ ಸೋಮಪ್ಪ ಗೋಡಿ ರವರು ದಿನಾಂಕ: 06.09.2019 ರಂದು ಜೆ.ಪಿ. ನಗರ ಠಾಣೆ ಮೊ.ಸಂ. 162/2019 ಕಲಂ 341, 354 ಐಪಿಸಿ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ತನಿಖೆಗೆ ಕೈಗೊಂಡಿರುತ್ತಾರೆ.

ಪಿರ್ಯಾದುದಾರರಿಗೆ ತನಿಖೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸ್‌ಗಳನ್ನು ಜಾರಿ ಮಾಡಿದ್ದರೂ ಸಹ ಸರಿಯಾದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ನಾನು ಕೆ.ಹೆಚ್.ಆರ್.ಸಿ. ಯಲ್ಲಿ ದೂರು ನೀಡಿದ್ದು, ಅಲ್ಲಿಯೇ ಬಗೆಹರಿಸಿಕೊಳ್ಳುತ್ತೇನೆ ಎಂದು ತಿಳಿಸಿದ್ದು, ನಿಗದಿತ ಸಮಯದಲ್ಲಿ ದಾಖಲಾತಿಗಳನ್ನು ಸಲ್ಲಿಸದೆ ಇದ್ದುದರಿಂದ ತನಿಖಾಧಿಕಾರಿಗಳು ಮಾನ್ಯ ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ.

ಅರ್ಜಿದಾರರು ಶ್ರೀಮತಿ ಪ್ರೇಮ ಎಸ್.ಎಂ. ರವರು ಠಾಣೆಗೆ ಹಾಜರಾಗಿ ತಮ್ಮ ಸಮಸ್ಯೆಯನ್ನು ಠಾಣೆಯಲ್ಲಿ ದೂರು ನೀಡಿ ಬಗೆಹರಿಸಿಕೊಳ್ಳದೆ ಹಾಗೂ ಜೆ.ಪಿ. ನಗರ ಪೋಲೀಸ್ ಠಾಣೆಯಲ್ಲಿ ನೀಡಿದ ದೂರಿಗೆ ಸಂಬಂಧಿಸಿದಂತೆ ಸರಿಯಾದ ದಾಖಲಾತಿಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸದೆ ಘನ ಆಯೋಗದಲ್ಲಿ ನನ್ನ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿರುತ್ತಾರೆ. ಅರ್ಜಿದಾರರು ಹಾಗೂ ಎದುರುದಾರರ ನಡುವಿನ ವಿಷಯವು 3 ತಿಂಗಳ ಹಿಂದಿನ ಘಟನೆಯಾಗಿರುವುದರಿಂದ ಅರ್ಜಿದಾರರು ನೀಡಿದ ದೂರಿನ ಮೇರೆಗೆ ಪ್ರಥಮವಾಗಿ ಎನ್.ಸಿ.ಆರ್. ಸಂ.284/2019 ರೀತ್ಯಾ ದಾಖಲಿಸಿ ಕ್ರಮ ಕೈಗೊಂಡಿದ್ದು, ನಂತರ ಅರ್ಜಿದಾರರು ಎದುರಾಳಿಯನ್ನು ಠಾಣೆಗೆ ಕರೆಯಿಸಿದರೂ ಸಹ ವಿಚಾರಣೆಗೆ ಹಾಜರಾಗದೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಆರಕ್ಷಕ ಉಪಾಧೀಕ್ಷಕ, ಶ್ರೀ ಕೇಶವ್ ರವರಿಂದ ಜೆ.ಪಿ. ನಗರ ಪೋಲೀಸ್ ಠಾಣೆಗೆ ಕರೆ ಮಾಡಿಸಿ ನನಗೆ ಎನ್.ಸಿ.ಆರ್. ನಲ್ಲಿ ವಿಚಾರಣೆ ಮಾಡುವುದು ಬೇಡ, ಎಫ್ಐಆರ್ ದಾಖಲಿಸುವಂತೆ ಸೂಚಿಸಿದ ಮೇರೆಗೆ ದಿನಾಂಕ: 06-09-2019 ರಂದು ಜೆ.ಪಿ. ನಗರ ಪೋಲೀಸ್ ಠಾಣೆ ಮೊ.ಸಂ.

> 162/2019 ಕಲಂ: 341, 354 ಐಪಿಸಿ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ತನಿಖೆಗೆ ಕೈಗೊಳ್ಳಲಾಗಿರುತ್ತದೆ.
>
> ಠಾಣೆಗೆ ಯಾರೇ ಸಾರ್ವಜನಿಕರು ದೂರು ನೀಡಲು ಬಂದರೆ ಕೂಡಲೇ ಅವರ ಸಮಸ್ಯೆಯನ್ನು ಆಲಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ವಿಶೇಷವಾಗಿ ಮಹಿಳೆಯರು ದೂರು ನೀಡಿದ್ದಲ್ಲಿ, ಮಹಿಳಾ ಸಿಬ್ಬಂದಿಗಳಿಂದಲೇ ವಿಚಾರಣೆ ಮಾಡಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ. ಮಾನ್ಯರ ಆದೇಶದಲ್ಲಿ ಆರೋಪಿಸಿರುವಂತೆ ದೂರುದಾರರ ದೂರನ್ನು ಸ್ವೀಕರಿಸಲು ತಡೆ ಮಾಡಿ ಕರ್ತವ್ಯ ಲೋಪ ಮಾಡಿರುವುದಿಲ್ಲ, ಬದಲಾಗಿ ಅರ್ಜಿದಾರರು ನೀಡಿದ ದೂರಿನ ಪ್ರಕಾರ ಕಾನೂನು ರೀತ್ಯಾ ಕ್ರಮ ಕೈಗೊಂಡಿರುತ್ತದೆ…"

ಶ್ರೀ ಸೋಮಪ್ಪ ಗೋಡಿ ರವರು ಅವರ ಲಿಖಿತ ಸಮಜಾಯಿಷಿಯಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಹೇಳಿದ್ದು, ಅದರ ಬಗ್ಗೆ ಸ್ಪಷ್ಟ ಪಡಿಸಿಕೊಳ್ಳಲು ಶ್ರೀಮತಿ ಪ್ರೇಮರವರನ್ನು ದಿನಾಂಕ 08–08–2022ರಂದು ಆಯೋಗದ ಮುಂದೆ ಹಾಜರಾಗಬೇಕೆಂದು ತಿಳಿಸಿದ್ದು, ದಿನಾಂಕ 08–08–2022ರಂದು ಶ್ರೀಮತಿ ಪ್ರೇಮ ರವರು ಆಯೋಗದ ಮುಂದೆ ಹಾಜರಾಗಿ ಅವರ ಮುಂದುವರೆದ ಹೇಳಿಕೆ ನೀಡಿರುತ್ತಾರೆ.

ಶ್ರೀಮತಿ ಪ್ರೇಮ ರವರು ದಿನಾಂಕ:08–08–2022ರಂದು ಆಯೋಗದ ಮುಂದೆ ನೀಡಿದ ಮುಂದುವರೆದ ಹೇಳಿಕೆಯು ಕೆಳಕಂಡಂತಿರುತ್ತದೆ:

> "ನಾನು ವಾಸವಿದ್ದ ಹಿಂದಿನ ಮನೆಯ ವಿಳಾಸ ನಂ.1730, 18ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಜೆ.ಪಿ. ನಗರ 2ನೇ ಫೇಸ್, ಬೆಂಗಳೂರಿನ ಮನೆಯ ಮಾಲೀಕರಾದ ಶ್ರೀ ರಮೇಶ್‌ರವರು ದಿನಾಂಕ.18.05.2022 ರಂದು ನಮ್ಮ ಮನೆಗೆ ಬಂದು ನನ್ನ ಕೈ ಹಿಡಿದು ನನ್ನ ಜೊತೆ ಸಹಕರಿಸು ಎಂದು ನನ್ನ ಮೇಲೆ ದೌರ್ಜನ್ಯವೆಸಗಿದರು. ಇದರಿಂದ ನಾನು ಈ ಮನೆಯಲ್ಲಿ ಇರುವುದು ಸೇಫ್ ಅಲ್ಲವೆಂದು ತಿಳಿದು, ನಾನು ಬೇರೆ ಮನೆ ಹುಡುಕಾಡಿ, ಒಂದು ವಾರ ಆದ ಮೇಲೆ ನನಗೆ ಮನೆ ತೋರಿಸಿದ ಶ್ರೀ ಶಿವಣ್ಣ ರವರ ಹತ್ತಿರ ಹೋಗಿ ನಾನು ಮನೆ ಖಾಲಿ ಮಾಡುತ್ತೇನೆಂದು ಹೇಳಿದ ಮೇಲೆ, ಪುನ: 3,4 ದಿನಗಳ ನಂತರ ಮನೆ ಮಾಲೀಕರಾದ ಶ್ರೀ ರಮೇಶ್ ರವರು ನಾನು ವಾಸವಿದ್ದ ಮನೆಗೆ ಬಂದು ಮತ್ತೆ ನನ್ನ ಕೈಹಿಡಿದು ನನ್ನ ಜೊತೆ ಸಹಕರಿಸು ಎಂದು ದೌರ್ಜನ್ಯವೆಸಗಿದಾಗ ಅದಕ್ಕೆ ನಾನು ಪ್ರತಿರೋಧಿಸಿದಾಗ ನನ್ನ ಕೈಯಲ್ಲಿದ್ದ ಮೊಬೈಲ್‌ನ್ನು ಕಿತ್ತುಕೊಂಡು ಹೊಡೆದು ಹಾಕಿ, ನನ್ನನ್ನು ಮನೆಯಿಂದ ಹೊರಗೆ ತಳ್ಳಿದ ಮೇಲೆ ನಾನು ಹೋಯ್ಸಳದವರಿಗೆ ಕರೆ ಮಾಡಿದಾಗ ಅವರು ನಮ್ಮ ಮನೆಯ ಹತ್ತಿರ ಬಂದು ಜೆ.ಪಿ ನಗರ ಪೊಲೀಸ್ ಠಾಣೆಗೆ ಹೋಗುವಂತೆ ಸಲಹೆ ನೀಡಿದ ಮೇರೆಗೆ, ನಾನು ಜೆ.ಪಿ ನಗರ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ಶ್ರೀ

ಸೋಮಪ್ಪಗೋಡಿರವರನ್ನು ಭೇಟಿ ಮಾಡಿ ಮೌಖಿಕವಾಗಿ ಘಟನೆ ನಡೆದ ವಿಷಯದ ಬಗ್ಗೆ ತಿಳಿಸಿದಾಗ ಅವರು ನನ್ನ ದೂರನ್ನು ಸ್ವೀಕರಿಸಲಿಲ್ಲ.

ಇದಾದ ನಂತರ ನಾನು ಪದೇ ಪದೇ ಶ್ರೀ ಶಿವಣ್ಣನವರ ಬಳಿ ಹೋಗಿ ನನ್ನ ಮನೆಯ ಸಾಮಾಗ್ರಿಗಳನ್ನು ಹಿಂತಿರುಗಿಸಿಕೊಡುವಂತೆ ಮಾತನಾಡಿ ಬರುತ್ತಿದ್ದೆ ಹಾಗೂ ಜೆ.ಪಿ ನಗರ ಪೊಲೀಸ್ ಠಾಣೆಗೆ 3 ರಿಂದ 4 ಬಾರಿ ಹೋಗಿ ಪಿ.ಎಸ್.ಐ ಶ್ರೀ ಸೋಮಪ್ಪಗೋಡಿ ರವರನ್ನು ಭೇಟಿ ಮಾಡಿ ನನ್ನ ಮೇಲೆ ದೌರ್ಜನ್ಯವೆಸಗಿದ ಬಗ್ಗೆ ಹಾಗೂ ನನ್ನ ಮನೆಯ ಸಾಮಾಗ್ರಿಗಳನ್ನು ಹಿಂತಿರುಗಿಸಿಕೊಡುವ ವಿಷಯದ ಬಗ್ಗೆ ಪಿ.ಎಸ್.ಐ ಶ್ರೀ ಸೋಮಪ್ಪಗೋಡಿರವರಿಗೆ ಹೇಳುತ್ತಿದ್ದೆ, ಆದರೆ ಪಿ.ಎಸ್.ಐ ಶ್ರೀ ಸೋಮಪ್ಪಗೋಡಿರವರು ಈ ಬಗ್ಗೆ ಯಾವುದೇ ಪ್ರಕರಣ ದಾಖಲು ಮಾಡದೇ ನನ್ನ ಮೇಲೆ ಸಂಶಯಪಟ್ಟು ಮನೆಯ ಅಗ್ರಿಮೆಂಟ್ ಅನ್ನು ತೆಗೆದುಕೊಂಡು ಬಾ ಎಂದು ಹೇಳಿ ಕಳುಹಿಸಿಬಿಟ್ಟರು.

ನಂತರ ನನಗೆ ಒಬ್ಬರು ಪರಿಚಯವಿದ್ದ ವ್ಯಕ್ತಿ ಕಡೆಯಿಂದ ಮಾನವ ಹಕ್ಕುಗಳ ಆಯೋಗದ ಬಗ್ಗೆ ತಿಳಿದುಕೊಂಡು ದಿನಾಂಕ.25.08.2019 ರಂದು ಬಂದು ಆಯೋಗದ ಡಿವೈ. ಎಸ್.ಪಿ ಶ್ರೀ ಕೇಶವ್ ಸರ್ ರವರನ್ನು ಭೇಟಿ ಮಾಡಿ ಘಟನೆ ನಡೆದ ವಿಷಯವನ್ನು ಹೇಳಿದಾಗ, ಠಾಣೆಯಲ್ಲಿ ನನ್ನ ದೂರಿನ ಮೇಲೆ ಎನ್.ಸಿ.ಆರ್ ನಂ.284/2019 ಅನ್ನು ದಾಖಲು ಮಾಡಿಕೊಂಡರು ಆದರೆ ಯಾವುದೇ ಕ್ರಮ ಜರುಗಿಸದ ಕಾರಣ ಪುನ: ಮಾನವ ಹಕ್ಕುಗಳ ಆಯೋಗಕ್ಕೆ ಬಂದು ಆಯೋಗದ ಡಿವೈ. ಎಸ್.ಪಿ ಶ್ರೀ ಕೇಶವ್ ಸರ್ ರವರನ್ನು ಭೇಟಿ ಮಾಡಿ ವಿಷಯ ತಿಳಿಸಿದಾಗ, ಠಾಣೆಯಲ್ಲಿ ಎಫ್.ಐ.ಆರ್ ನಂ.162/2019 ಅನ್ನು ದಾಖಲು ಮಾಡಿಕೊಂಡರು.

ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಅವರ ಲಿಖಿತ ಸಮಜಾಯಿಷಿಯಲ್ಲಿ ನಾನು ಅವರು ಹೇಳಿದ ದಿನಾಂಕಗಳಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಸಹಕರಿಸಲಿಲ್ಲವೆಂದು ನನ್ನ ಮೇಲೆ ಆಪಾದನೆ ಮಾಡಿರುವುದು ಸತ್ಯಕ್ಕೆ ದೂರುವಾದದ್ದು. ನಾನು ಯಾವಾಗ ಪೊಲೀಸರು ಫೋನ್ ಮೂಲಕ ಕರೆ ಮಾಡಿ ಠಾಣೆಗೆ ಕರೆಯುತ್ತಿದ್ದರೋ ಆ ದಿನಾಂಕಗಳಲೆಲ್ಲ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನಗೆ ಒಮ್ಮೆಯಾದರೂ ಜೆ.ಪಿ ನಗರ ಪೊಲೀಸ್ ಠಾಣೆಯಿಂದ ಠಾಣೆಗೆ ಹಾಜರಾಗುವಂತೆ ಯಾವುದೇ ನೋಟೀಸ್ ಕಳುಹಿಸಿರುವುದಿಲ್ಲ.

ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ರವರು ಅವರ ಲಿಖಿತ ಸಮಜಾಯಿಷಿಯಲ್ಲಿ ನನ್ನ ಮೇಲೆ ದೌರ್ಜನ್ಯವೆಸಗಿರುವ ಬಗ್ಗೆ ಆರೋಪಿ ಶ್ರೀ ರಮೇಶ್ ಎಂಬುವವರು ಉಪಯೋಗಿಸುತ್ತಿರುವ ಮೊಬೈಲ್ ನಂ.9886300651ನ ಸಿಡಿಆರ್ ಪರಿಶೀಲನೆ ಮಾಡುವಾಗ ಅದು ಜಕ್ಕೂರು ಗ್ರಾಮ, ಯಲಹಂಕ ವ್ಯಾಪ್ತಿಯಲ್ಲಿ ಕಂಡು ಬಂದಿರುತ್ತದೆಂದು ಹೇಳಿರುತ್ತಾರೆ. ಆದರೆ ಶ್ರೀ ರಮೇಶ್ ರವರು ದಿನಾಂಕ.18.05.2019 ರಂದು ಹಾಗೂ ಸದರಿ ದಿನಾಂಕದಿಂದ 10,11 ದಿನಗಳು ಆದ ಮೇಲೆ ಮತ್ತೊಂದು ಬಾರಿ ಮನೆಗೆ ಬಂದು ನನ್ನೊಂದಿಗೆ ಸಹಕರಿಸು ಎಂದು ನನ್ನ ಮೇಲೆ ದೌರ್ಜನ್ಯವೆಸಗಿದರು ನಿಜ.

> ನಾನು ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ರವರ ಲಿಖಿತ ಸಮಜಾಯಿಷಿಯಲ್ಲಿ 30,000/– ರೂಗಳ ಚೆಕ್ ಅನ್ನು ಮೆ॥ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್‌ನ ಅಕೌಂಟ್‌ನಿಂದ ಕೊಟ್ಟಿರುವುದು ನಿಜವಲ್ಲ. ನಾನು ನನ್ನ ಸ್ವಂತ ಅಕೌಂಟ್ ಕೆನರಾ ಬ್ಯಾಂಕ್, ವೈ.ಹುಣಸೇನಹಳ್ಳಿ ಬ್ರಾಂಚಿನಲ್ಲಿರುವ ಅಕೌಂಟ್‌ನ ಚೆಕ್ ಕೊಟ್ಟಿದ್ದೇನೆ, ಈ ಅಕೌಂಟ್‌ನ ಪಾಸ್‌ಬುಕ್ ನನ್ನ ಬಳಿ ಇದೆ."

ದೂರು, ವರದಿ, ಅಭಿಪ್ರಾಯ, ಮರುಪರಿಶೀಲನಾ ವರದಿ, ಹೇಳಿಕೆಗಳು, ಆಯೋಗದ ತನಿಖಾಧಿಕಾರಿಯ ವಿಚಾರಣಾ ವರದಿಗಳು, ಲಿಖಿತ ಸಮಜಾಯಿಷಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದೂರುದಾರರಾದ ಶ್ರೀಮತಿ ಪ್ರೇಮ ರವರು ದಿನಾಂಕ 18–05–2019 ರಂದು ಶ್ರೀಮತಿ ಪ್ರೇಮ ರವರ ಮೇಲೆ ಶ್ರೀ ರಮೇಶ್ ರವರು ಅಸಭ್ಯವಾಗಿ ವರ್ತಿಸಿದ ಘಟನೆಯ ನಂತರ ಶ್ರೀಮತಿ ಪ್ರೇಮ ರವರು ಮನೆಯನ್ನು ಖಾಲಿ ಮಾಡುವುದಾಗಿ ಶ್ರೀ ಶಿವಣ್ಣ ರವರಿಗೆ ತಿಳಿಸಿದ್ದು, ಘಟನೆ ನಡೆದ 10–11 ದಿನಕ್ಕೆ ಮತ್ತೆ ಶ್ರೀ ರಮೇಶ್ ರವರು ಶ್ರೀಮತಿ ಪ್ರೇಮ ರವರ ಮನೆಗೆ ಬಂದು ಅವರೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದು, ಆಕೆಯು ಹೊಯ್ಸಳ ರವರಿಗೆ ಕರೆ ಮಾಡಿದ್ದು, ಹೊಯ್ಸಳದವರು ಪೊಲೀಸ್ ಠಾಣೆಗೆ ಹೋಗೆಂದು ಹೇಳಿದ ಮೇರೆಗೆ ಶ್ರೀ ರಮೇಶ್ ರವರ ವಿರುದ್ಧ ದೂರು ನೀಡಲು ಜೆ.ಪಿ.ನಗರ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ. ಶ್ರೀ ಸೋಮಪ್ಪ ಗೋಡಿ ರವರ ಮುಂದೆ ನಡೆದ ಘಟನೆಯ ಬಗ್ಗೆ ಹೇಳಿದರೂ ಪಿ.ಎಸ್.ಐ. ಶ್ರೀ ಸೋಮಪ್ಪ ಗೋಡಿ ರವರು ದೂರನ್ನು ಸ್ವೀಕರಿಸದೇ ಬದಲಿಗೆ ಶ್ರೀಮತಿ ಪ್ರೇಮ ರವರ ಮೇಲೆ ಸಂಶಯ ಪಟ್ಟು ಪ್ರಶ್ನಿಸಿರುತ್ತಾರೆಂದು ಶ್ರೀಮತಿ ಪ್ರೇಮ ರವರ ಹೇಳಿಕೆಯಲ್ಲಿ ಹಾಗೂ ಅವರ ಮುಂದುವರೆದ ಹೇಳಿಕೆಯಲ್ಲಿ ನುಡಿದಿರುವುದು ಕಂಡುಬಂದಿರುತ್ತದೆ. ಘಟನೆ ನಡೆದ ದಿನ ಶ್ರೀಮತಿ ಪ್ರೇಮ ರವರು ಜೆ.ಪಿ. ನಗರ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ರವರ ಮುಂದೆ ಘಟನೆಯ ಬಗ್ಗೆ ಹೇಳಿಕೊಂಡಾಗ ದೂರನ್ನು ಸ್ವೀಕರಿಸಿ ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರೇ ಶ್ರೀಮತಿ ಪ್ರೇಮ ರವರ ಮನೆಯ ಸಾಮಾಗ್ರಿ / ವಸ್ತುಗಳು ಅವರಿಗೆ ದೊರಕುತ್ತಿದ್ದವು. ಆದರೆ ಪಿ.ಎಸ್.ಐ. ಶ್ರೀ ಸೋಮಪ್ಪ ಗೋಡಿ ರವರು ದೂರನ್ನು ಸ್ವೀಕರಿಸದೇ ಹಾಗೂ ಘಟನಾ ಸ್ಥಳಕ್ಕೆ ಹೋಗದೇ ಕರ್ತವ್ಯ ಲೋಪವೆಸಗಿರುವುದು ಕಂಡು ಬರುತ್ತದೆ.

ಶ್ರೀಮತಿ ಪ್ರೇಮ ರವರು ಪದೇ ಪದೇ ಶ್ರೀ ಶಿವಣ್ಣನವರ ಬಳಿ ಹೋಗಿ ತನ್ನ ಮನೆಯ ಸಾಮಾಗ್ರಿಗಳನ್ನು ಹಿಂತಿರುಗಿಸಿಕೊಡುವಂತೆ ಮಾತನಾಡಿಕೊಂಡು ಬರುತ್ತಿದ್ದು ಹಾಗೂ ಜೆ.ಪಿ ನಗರ ಪೊಲೀಸ್ ಠಾಣೆಗೆ 3 ರಿಂದ 4 ಬಾರಿ ಹೋಗಿ ಪಿ.ಎಸ್.ಐ ಶ್ರೀ ಸೋಮಪ್ಪಗೋಡಿ ರವರನ್ನು ಭೇಟಿ ಮಾಡಿ ತನ್ನ ಮೇಲೆ ದೌರ್ಜನ್ಯವೆಸಗಿದ ಬಗ್ಗೆ ಹಾಗೂ ತನ್ನ ಮನೆಯ ಸಾಮಾಗ್ರಿಗಳನ್ನು

ಹಿಂತಿರುಗಿಸಿಕೊಡುವ ವಿಷಯದ ಬಗ್ಗೆ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿರವರಿಗೆ ಹೇಳುತ್ತಿದ್ದು, ಪಿ.ಎಸ್.ಐ ಶ್ರೀ ಸೋಮಪ್ಪಗೋಡಿರವರು ಈ ಬಗ್ಗೆ ಯಾವುದೇ ಪ್ರಕರಣ ದಾಖಲು ಮಾಡದೇ ತನ್ನ ಮೇಲೆ ಸಂಶಯಪಟ್ಟು ಮನೆಯ ಅಗ್ರಿಮೆಂಟ್ ಅನ್ನು ತೆಗೆದುಕೊಂಡು ಬಾ ಎಂದು ಹೇಳಿ ಕಳುಹಿಸಿಬಿಟ್ಟರೆಂದು ಶ್ರೀಮತಿ ಪ್ರೇಮ ರವರ ಮುಂದುವರೆದ ಹೇಳಿಕೆಯಲ್ಲಿ ಕಂಡುಬರುತ್ತದೆ.

ಜೆ.ಪಿ. ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ಸ್ವೀಕರಿಸದೇ ಇದ್ದ ಕಾರಣ ಶ್ರೀಮತಿ ಪ್ರೇಮರವರಿಗೆ ಪರಿಚಯವಿದ್ದ ವ್ಯಕ್ತಿಯಿಂದ ಆಯೋಗದ ಬಗ್ಗೆ ತಿಳಿದುಕೊಂಡು ದಿನಾಂಕ 25–08–2019ರಂದು ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಭೇಟಿ ಮಾಡಿ ಶ್ರೀ ಕೇಶವ್ ರವರು ಜೆ.ಪಿ. ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವರಿಗೆ ಶ್ರೀಮತಿ ಪ್ರೇಮರವರ ಮನೆಯ ಸಾಮಾಗ್ರಿಗಳನ್ನು ಕೊಡಿಸುವಂತೆ ಕರೆ ಮಾಡಿದ ನಂತರ ಅಸಂಜ್ಞೇಯ ಪ್ರಕರಣ ದಾಖಲು ಮಾಡಿರುತ್ತಾರೆಂದು ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಠಾಣೆಗೆ ಹೋದರು ಯಾವುದೇ ರೀತಿ ಕ್ರಮ ಜರುಗಿಸಿರುವುದಿಲ್ಲವೆಂದು ಹಾಗೂ ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಪುನಃ ಭೇಟಿ ಮಾಡಿದಾಗ, ಡಿವೈ.ಎಸ್.ಪಿ ಶ್ರೀ ಕೇಶವ್ ರವರು ಜೆ.ಪಿ. ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವರಿಗೆ ಕರೆ ಮಾಡಿದ ನಂತರ ಸಂಜ್ಞೇಯ ಪ್ರಕರಣ ಮೊ.ಸ. 162/2019 ದಾಖಲು ಮಾಡಿರುತ್ತಾರೆಂದು ಹಾಗೂ ಸದರಿ ಸಂಜ್ಞೇಯ ಪ್ರಕರಣದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದದರಿಂದ ಪುನಃ ಆಯೋಗದ ಡಿವೈ.ಎಸ್.ಪಿ ಶ್ರೀ ಕೇಶವ್ ರವರನ್ನು ಭೇಟಿ ಮಾಡಿದ್ದು, ಅವರ ಸಲಹೆಯ ಮೇರೆಗೆ ಆಯೋಗದಲ್ಲಿ ದೂರನ್ನು ದಾಖಲಿಸಿರುತ್ತೇನೆಂದು ಶ್ರೀಮತಿ ಪ್ರೇಮ ರವರ ಹೇಳಿಕೆಯಲ್ಲಿ ಹಾಗೂ ಅವರ ಮುಂದುವರೆದ ಹೇಳಿಕೆಯಲ್ಲಿ ನುಡಿದಿರುವುದು ಕಂಡುಬಂದಿರುತ್ತದೆ.

ಇದಕ್ಕೆ ಪೂರಕವಾಗಿ ದಿನಾಂಕ 12–01–2022 ರಂದು ಆಯೋಗದ ಡಿವೈ.ಎಸ್.ಪಿ. ಶ್ರೀ ಕೇಶವ್ ರವರ ಹೇಳಿಕೆಯಲ್ಲಿ ದಿನಾಂಕ 25–08–2019 ರಂದು ಶ್ರೀಮತಿ ಪ್ರೇಮ ರವರು ಆಯೋಗದ ಡಿವೈ.ಎಸ್.ಪಿ. ಶ್ರೀ ಕೇಶವ್ ರವರನ್ನು ಭೇಟಿ ಮಾಡಿದ್ದು ಘಟನೆಯ ಬಗ್ಗೆ ವಿವರಿಸಿದ್ದು ಹಾಗೂ ಜೆ.ಪಿ ನಗರ ಪೊಲೀಸ್ ಠಾಣೆಗೆ ಹೋಗಿ ಶ್ರೀ ಸೋಮಪ್ಪ ಗೋಡಿ ರವರನ್ನು ಭೇಟಿ ಮಾಡಿ ದೂರು ಸ್ವೀಕರಿಸುವಂತೆ ಕೋರಿದ್ದು, ಶ್ರೀ ಸೋಮಪ್ಪ ಗೋಡಿ ರವರು ದೂರುನ್ನು ಸ್ವೀಕರಿಸಿರುವುದಿಲ್ಲವೆಂದು ತಿಳಿಸಿದ್ದು, ಅದಕ್ಕೆ ಶ್ರೀಮತಿ ಪ್ರೇಮ ರವರಿಗೆ ಆಯೋಗದಲ್ಲಿ ದೂರು ಅರ್ಜಿಯನ್ನು ಸಲ್ಲಿಸಲು ಸಲಹೆ ನೀಡಿರುತ್ತಾನೆ. ನಂತರ ಜೆ.ಪಿ ನಗರ ಆರಕ್ಷಕ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ ಕೆ.ಆರ್ ರವರಿಗೆ ದೂರನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರವಾಣಿ ಕರೆಯನ್ನು

ಮಾಡಿರುತ್ತಾರೆ. ತದನಂತರ ದಿನಾಂಕ: 06.09.2019 ರಂದು ಪುನ: ಶ್ರೀಮತಿ ಪ್ರೇಮ ರವರು ಆಯೋಗದ ಡಿವೈ.ಎಸ್.ಪಿ. ಶ್ರೀ ಕೇಶವ್ ರವರನ್ನು ಭೇಟಿ ಮಾಡಿದ್ದು ಜೆ.ಪಿ ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ್ ಕೆ.ಆರ್ ರವರು ಠಾಣಾ ಎನ್.ಸಿ.ಆರ್ ನಂ.284/2019 ರಲ್ಲಿ ದಾಖಲಿಸಿಕೊಂಡಿದ್ದು ಆದರೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ ಅಥವಾ ಇದುವರೆಗೂ ನನ್ನ ಸಮಸ್ಯೆ ಬಗೆಹರಿದಿರುವುದಿಲ್ಲ ಎಂದು ತಿಳಿಸಿದ್ದು, ಶ್ರೀಮತಿ ಪ್ರೇಮ ರವರಿಗೆ ಮತ್ತೊಮ್ಮೆ ದೂರು ಅರ್ಜಿಯನ್ನು ನೀಡುವಂತೆ ತಿಳಿಸಿದ್ದು ಮತ್ತೊಂದು ಬಾರಿ ಜೆ.ಪಿ ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ್ ಕೆ.ಆರ್ ರವರಿಗೆ ದೂರವಾಣಿ ಕರೆ ಮಾಡಿ ದೂರುದಾರರು ನೀಡಿರುವ ಅರ್ಜಿಯ ಸಮಸ್ಯೆ ಇನ್ನೂ ಬಗೆಹರಿಯದ ಕಾರಣ ಮತ್ತೊಮ್ಮೆ ಅರ್ಜಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿರುವುದಾಗಿ ಆಯೋಗದ ಡಿವೈ.ಎಸ್.ಪಿ. ಶ್ರೀ ಕೇಶವ್ ರವರು ಹೇಳಿಕೆಯಲ್ಲಿ ಕಂಡು ಬರುತ್ತದೆ.

ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಅವರ ಲಿಖಿತ ಸಮಜಾಯಿಷಿಯಲ್ಲಿ ಶ್ರೀಮತಿ ಪ್ರೇಮ ರವರು ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಅವರು ಹೇಳಿದ ದಿನಾಂಕಗಳಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಸಹಕರಿಸಲಿಲ್ಲವೆಂದು ತನ್ನ ಮೇಲೆ ಆಪಾದನೆ ಮಾಡಿರುವುದು ಸತ್ಯಕ್ಕೆ ದೂರುವಾದದ್ದೆಂದು ಹಾಗೂ ತಾನು ಯಾವಾಗ ಪೊಲೀಸರು ಫೋನ್ ಮೂಲಕ ಕರೆ ಮಾಡಿ ಠಾಣೆಗೆ ಕರೆಯುತ್ತಿದ್ದರೋ ಆ ದಿನಾಂಕಗಳಲೆಲ್ಲ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ತನಗೆ ಒಮ್ಮೆಯಾದರೂ ಜೆ.ಪಿ ನಗರ ಪೊಲೀಸ್ ಠಾಣೆಯಿಂದ ಠಾಣೆಗೆ ಹಾಜರಾಗುವಂತೆ ಯಾವುದೇ ನೋಟೀಸ್ ಕಳುಹಿಸಿರುವುದಿಲ್ಲವೆಂದು ಶ್ರೀಮತಿ ಪ್ರೇಮ ರವರ ಮುಂದುವರೆದ ಹೇಳಿಕೆಯಲ್ಲಿ ಕಂಡುಬರುತ್ತದೆ.

ಒಟ್ಟಾರೆಯಾಗಿ, ಅಂದಿನ ಜೆ.ಪಿ. ನಗರದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸೋಮಪ್ಪ ಗೋಡಿ, ಹಾಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ರವರು ದೂರನ್ನು ಸ್ವೀಕರಿಸದೇ ಹಾಗೂ ಘಟನಾ ಸ್ಥಳಕ್ಕೆ ಹೋಗದೇ, ಸರಿಯಾಗಿ ತನಿಖೆ ಮಾಡದೇ ಕರ್ತವ್ಯ ಲೋಪವೆಸಗಿರುವುದು ಕಂಡುಬಂದಿರುತ್ತದೆ.

ಅಂದಿನ ಜೆ.ಪಿ. ನಗರದ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ ಕೆ. ಆರ್. ರವರು ಠಾಣೆಯ ಉಸ್ತುವಾರಿ ಅಧಿಕಾರಿಯಾಗಿದ್ದು ದೂರುದಾರರಾದ ಶ್ರೀಮತಿ ಪ್ರೇಮ ರವರು ನೀಡಿದ ದೂರನ್ನು ಸ್ವೀಕರಿಸದೇ ಇದ್ದ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ರವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ

ಇದ್ದು ಹಾಗೂ ಶ್ರೀಮತಿ ಪ್ರೇಮ ರವರ ದೂರನ್ನು ತಡವಾಗಿ ಸ್ವೀಕರಿಸಿ ಹಾಗೂ ಸರಿಯಾಗಿ ಮೇಲ್ವಿಚಾರಣೆ ಮಾಡದೇ ಕರ್ತವ್ಯ ನಿರ್ಲಕ್ಷ್ಯತನ ತೋರಿರುವುದು ಕಂಡುಬಂದಿರುತ್ತದೆ.

ಈ ಮೇಲ್ಕಂಡ ಕಾರಣಗಳಿಂದ, ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

> ದೂರರ್ಜಿದಾರರಾದ ಶ್ರೀಮತಿ ಪ್ರೇಮ ಎಸ್.ಎಂ. ರವರಿಗೆ ರೂ. 50,000/– (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಜರೂರಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಅಂದಿನ ಜೆ.ಪಿ.ನಗರದ ಪಿ.ಎಸ್.ಐ ಶ್ರೀ ಸೋಮಪ್ಪ ಗೋಡಿ ಹಾಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಶ್ರೀ ಸೋಮಪ್ಪ ಗೋಡಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.
>
> ಅಂದಿನ ಜೆ.ಪಿ.ನಗರದ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ ಕೆ. ಆರ್., ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಸುಬ್ರಮಣ್ಯಪುರ ಪೊಲೀಸ್ ಠಾಣೆ ರವರ ಮೇಲೆ ಅಗತ್ಯ ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ

ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 18–10–2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.